Reg. No. M. 155.

If not delivered please return

"KODAGU" OFFICE MEKC

ಕೊಡಗು.

ಸತ್ಯೇನ ಧಾರ್ಯತೇ ಪೃಥ್ವೀ ವಿದ್ಯಾ ತೇನ ಪ್ರಾಪ್ಯತೇ ಪರಾ | ಪಶ್ಯನುತ್ಯೇನ ದೇಶಾನಾಂ ಸುಸ್ಥಿರಾ ರಾಜ ಸಂಪದಾ

ವಾರ್ಷಿಕ ಚಂದಾ ರೂ. ೩—೪—೦. ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೨ | ಮಡಿಕೇರಿ, ಸನ್ ೧೯೩೩ನೇ ಇಸವಿ ನವಂಬರ್ ತಾರೀಕು ೨೫ ನೇ ಶುಕ್ರವಾರ. | ಸಂಚಿಕೆ ೨

SARI-PIN.

BRACELETS.

NECKCHAINS.

EAR-RINGS.
(Thodus)

Cut-rubys Rs. 25 to 50
With diamond in centre Rs. 80 to 120

Gold Rs. 10
Set rubys forming any letter Rs. 12

NOSE-RINGS.
Diamond in small size of best quality Rs. 35
& upwards according to size.

MARRIAGE PRESENTATIONS

Attractive ahd inexpensive articles ready in stock. Frompt execution. Details on enquiry free with catalogue. Numerous customers in Coorg thoroughly satisfied with reliable service. Testimonials pouring in.

Silver Guindys, Photo lockets, Dimond nose-screws, cut-ruby ear-rings, etc., etc., etc., in all prices. Very attractive. Prices most moderate.

Estimates free on enquiry.

Telegrams: 'PRECIOUS.'

CATALOGUE ON ENQUIRY.

V. Subramaniaier Jeweller,

Designs free on enquiry.

Telephone: 3145.

52–1 Post Box 423, Triplicane, P. O., MADRAS.



26–22

ಎಂಪಯರ್ ಆಫ್ ಇಂಡಿಯಾ ಲೈಫ್ ಎಷ್ಯೂರೆನ್ಸ್ ಕಂಪೆನಿ ಲಿಮಿಟೆಡ್.

(ಸ್ಥಾಪನೆಯಾದದ್ದು 1897.)

1934ನೇ ಇಸವಿ ಮಾರ್ಚ್ 1ನೇ ತಾರೀಕಿನೊಳಗೆ ಹಕ್ಕಾಗುವ ಪೋಲಿಸಿಗಳ ಮೇಲೆ ಇಂಟರಿಮ್ ಬೋನಸ್ ಸುಗಳು ವರ್ಷಕ್ಕೆ 1000ಕ್ಕೆ ರೂ. 16ರಂತೆ ಹೋಲ್ ಲೈಫ್ ಎಷ್ಯೂರೆನ್ಸಿನ ಮೇಲೆಯೂ ಮತ್ತು
1000ಕ್ಕೆ ರೂ. 14ರಂತೆ ಎಂಡೋಮೆಂಟ್ ಎಷ್ಯೂರೆನ್ಸಿನ ಮೇಲೆಯೂ ಏರಿಸಲ್ಪಟ್ಟಿವೆ.

ಹೆಡ್ ಆಫೀಸು:—
ಎಂಪೈರ್ ಆಫ್ ಇಂಡಿಯಾ
ಲೈಫ್ ಬಿಲ್ಡಿಂಗ್ಸ್,
ಬೊಂಬಾಯಿ.

ಬ್ರಾಂಚ್ ಆಫೀಸು:—
152–3 ಕಮರ್ಷಲ್ ಸ್ಟ್ರೀಟ್,
ಬೆಂಗಳೂರು.

52–8

ಜನರಲ್ ಅಷ್ಯೂರೆನ್ಸ್ ಸೊಸೈಟಿ.

ಅ ಜ ವಿ ರ್.

ನಮ್ಮ ಆಯವ್ಯಯದ ಪಟ್ಟಿಯೇ ನಮ್ಮ ಅಭಿವೃದ್ಧಿಯನ್ನು ವ್ಯಕ್ತಗೊಳಿಸುತ್ತದೆ.

ವರ್ಷ	ಮೇಲ್ಪಟ್ಟ ವರ್ಷಾದಾಯ	ಮೇಲ್ಪಟ್ಟ ಮೂಲಧನ	ಖರ್ಚು ವಂಚನೆದ ಶೇಕಡ
1911	46,248	49,442	82.9
1921	2,92,627	6,53,350	43.2
1931	12,50,000	40,00 000	28.2

ಬೋನಸ್ಸು.

ಕುರ್ತು ನಫೆ ಬರುವ ಜೀವಾವಧಿ ಪಾಲಿಸಿಗಳ ಮೇಲೆ ವರ್ಷ ಒಂದಕ್ಕೆ ಶೇಕಡ 22½

ಚೆನ್ನಾಗಿ ಕೆಲಸಮಾಡಿ ಅಭಿವೃದ್ಧಿ ಸ್ಥಿತಿಯಲ್ಲಿರುವ ಈ ಸೊಸೈಟಿಯಲ್ಲಿ ಏವೆ ಮಾಡಿ ಕಡಿವೆ ಪ್ರೀಮಿಯಂ ಪಾವತಿ ಮಾಡುವ ಸೌಲಭ್ಯ ಹೊಂದಿ ಅಥವಾ ಈ ಕಂಪೆನಿಯ ಪರವಾಗಿ ಕೆಲಸಮಾಡಿ ಉತ್ತಮ ಕಮಿಶನ್ ದರದ ಪ್ರಯೋಜನ ಹೊಂದಿ.

ಹೆಚ್ಚು ವಿಚಾರಗಳಿಗೆ ಈ ವಿಳಾಸಕ್ಕೆ ಬರೆಯಿರಿ:—

ಎ. ರಾಮಚಂದ್ರರಾವ್,
ಸುಪರಿಂಟೆಂಡೆಂಟ್,
ಮಿಂಟೋ ಆಸ್ಪತ್ರೆ ಬಳಿ,
ಬೆಂಗಳೂರು.

52—31

ಕೊಡಗು.

ಪ್ರೆಸ್ ಆರ್ಡಿನೆನ್ಸ್

ಜಾರಿಯಲ್ಲಿರುವ ವರೆಗೆ

ಪ್ರಕಟಿಸುವುದಿಲ್ಲ.

ನವಂಬರ್ ತಾ. ೨೫ನೇ ಶುಕ್ರವಾರ.

ಕೋಮುವಾರು ಸಮಸ್ಯೆ.

ಅಲ್ಲಹಾಬಾದು ಪರಿಷತ್ತಿನ ಜಯ.

ಒಗ್ಗಟ್ಟು ಕಮಿಟಿಯ ತೀರ್ಮಾನ.

ಹಿಂದೂ – ಮುಸ್ಲಿಂ – ಸಿಕ್ಖರ ಒಪ್ಪಂದ.

ಮುಂದಾಳುಗಳ ಅಭಿಪ್ರಾಯ.

ಈ ತಿಂಗಳ ಸುರುವಿನಲ್ಲಿ ಅಲ್ಲಾಹಾಬಾದಿನಲ್ಲಿ ಪ್ರಾರಂಭವಾದ ಹಿಂದೂ – ಮುಸ್ಲಿಂ – ಸಿಕ್ ಪ್ರತಿನಿಧಿಗಳ ಸಭೆಯಿಂದ ಒಗ್ಗಟ್ಟನ್ನು ಸಾಧಿಸಲು ನೇಮಿಸಲ್ಪಟ್ಟ ಕಮಿಟಿಯು 17 ದಿವಸಗಳು ಎಡೆಬಿಡದೆ ಕೆಲಸ ಮಾಡಿ, ತಾ. 17ರಲ್ಲಿ ತನ್ನ ಕಾರ್ಯವನ್ನು ಜಯಪ್ರದವಾಗಿ ಅಂತ್ಯಗೊಳಿಸಿತು. ಈ ಒಗ್ಗಟ್ಟಿನ ತೀರ್ಮಾನಕ್ಕೆ ಬರಲು ಆ ಕಮಿಟಿಯವರು 150 ಗಂಟೆ ಕಾಲ ದೀರ್ಘ ಚರ್ಚೆ ಮಾಡಬೇಕಾಯಿತು. ಇಷ್ಟು ದೀರ್ಘ ಕಾಲ ಎಡೆಬಿಡದೆ ಚರ್ಚೆ ನಡಿಸಿದ ವಿಷಯಂಗೇ ಈ ವರೆಗೆ ಆಗಿರುವುದಿಲ್ಲವಂತೆ. ಮಹಾತ್ಮ ಗಾಂಧಿಯವರು ಕಳೆದ ವರ್ಷ 2 ನೇ ದುಂಡು ಮೇಜು ಪರಿಷತ್ತಿಗೆ ಹೋಗುವ ಮೊದಲು ಬೊಂಬಾಯಿಯಲ್ಲಿ ಕಾಂಗ್ರೆಸಿನ ವರ್ಕಿಂಗ್ ಕಮಿಟಿಯ ವಿಷಯಂಗು 14 ದಿವಸಗಳ ವರೆಗೆ ನಡೆಯಿತು. ಆ ದೀರ್ಘ ಚರ್ಚೆಯನ್ನೂ ಕೂಡ ಈ ಕಮಿಟಿಯು ವಿಷಯಿತು.

ಒಗ್ಗಟ್ಟಿನ ಕಮಿಟಿಯನ್ನು ನೇಮಿಸಿದ ಸರ್ವಪಕ್ಷೀಯ ಸಭೆಯಲ್ಲಿ 63 ಹಿಂದೂಗಳೂ, 39 ಮುಸಲ್ಮಾನರೂ, 11 ಸಿಖ್ಖರೂ ಮತ್ತು 8 ಇಂಡಿಯನ್ ಕ್ರಿಶ್ಚಿಯನರೂ, ಒಟ್ಟು 121 ಪ್ರತಿನಿಧಿಗಳು ಹಾಜರಿದ್ದರು. ಇವರು, ಹಿಂದೂ ಮಹಾ ಸಭಾ, ಪಂಜಾಬಿನ ರಾಷ್ಟ್ರೀಯ ಹಿಂದೂ ಸಭಾ, ಇಂಡಿಯನ್ ನೇಶನಲ್ ಕಾಂಗ್ರೆಸ್, ಲಿಬರಲ್ ಪಕ್ಷ, ನೇಶನಲಿಸ್ಟ್ ಪಕ್ಷ, ವ್ಯಾಪಾರಿಗಳ ಸಂಘ, ಜಮೀನ್ದಾರರ ಪಕ್ಷ, ಸಿಂಧಿನ ಹಿಂದುಗಳ ಪಕ್ಷ, ಅಖಿಲ ಭಾರತ ಖಿಲಾಫತ್ ಕಮಿಟಿ, ಅಖಿಲಭಾರತ ಮುಸ್ಲಿಂ ಕಾನ್‌ಫರೆನ್ಸ್, ಅಖಿಲ ಭಾರತ ನೇಶನಲಿಸ್ಟ್ ಪಾರ್ಟಿ, ಅಖಿಲ ಭಾರತ ಮುಸ್ಲಿಂ ಲೀಗ್, ಮುಸ್ಲಿಂಯೂತ್ ಲೀಗ್ ಜಮಿಯತ್ ಉಲ್ ಉಲೇಮಾ ಹಿಂದ್, ಪಂಜಾಬಿನ ಹರಾರ್ ಪಾರ್ಟಿ, ಅಖಿಲ ಭಾರತ ತಿಯಾ ಕಾನ್‌ಫರೆನ್ಸ್, ಸಿಖ್ಖರು ಮತ್ತು ಇಂಡಿಯನ್ ಕ್ರಿಶ್ಚಿಯನರ ಪ್ರತಿನಿಧಿಗಳಾಗಿದ್ದರು.

ಈ ಕಮಿಟಿಯವರು ಅಕ್ಟೋಬರಿನಲ್ಲಿ ಮೂಡಿದ ಒಪ್ಪಂದದ ಪ್ರತಿಯೊಂದೂ ಭಾಗವೂ ಚೆನ್ನಾಗಿ ಚರ್ಚಿಸಲ್ಪಟ್ಟು, ಅದಕ್ಕೆ ಸಂಬಂಧಪಟ್ಟ ಪಾರ್ಟಿಯ ಮೆಂಬರುಗಳಿಗೆ ತೃಪ್ತಿಕರವಾದ ಮೇಲೆ ಸರ್ವಸಮ್ಮತದಿಂದ ಅಂಜೂರು ಮಾಡಿದ್ದಾಗಿದೆ. ಅಲ್ಲದೆ ಸದರಿ ಮೆಂಬರುಗಳು ಈ ಒಪ್ಪಂದವನ್ನು ತಮ್ಮ ತಮ್ಮ ಸಂಸ್ಥೆಗಳ ಮುಂದಿಟ್ಟು, ಅವುಗಳ ಅಭಿಪ್ರಾಯಗಳನ್ನು ದಿಸೆಂಬರು ತಾರೀಕು 4ರಲ್ಲಿ ನಡೆಯುವ ಸರ್ವ ಪಕ್ಷೀಯ ಸಭೆಗೆ ತಿಳಿಸಲು ಒಪ್ಪಿರುವರು. ಸದರಿ ಕಾನ್‌ಫರೆನ್ಸಿನಲ್ಲಿ ಎಲ್ಲಾ ತರಹದ ಸೂಚನೆಗಳನ್ನು ಸಾಂಗವಾಗಿ ಚರ್ಚಿಸಿ ಒಂದು ತೀರ್ಮಾನಕ್ಕೆ ಬರಲಾಗುವುದು.

ಒಪ್ಪಂದದ ಶರತ್ತುಗಳು.

ಪ್ರಾಥಮಿಕ ಹಕ್ಕುಗಳ ಪಟ್ಟಿಯಲ್ಲಿ ಪ್ರತಿಯೊಂದು ಕೋಮಿನ ಸಾಹಿತ್ಯ, ಭಾಷೆ, ವಿದ್ಯೆ, ಮತಾಚಾರಗಳ ಆಚರಣೆ ಮುಂತಾದವುಗಳಿಗೆ ತಕ್ಕ ಭದ್ರತೆ ಇಡಲಾಗುವುದು. ಕೋಮುಗಳಿಗೆ ಸಂಬಂಧಿಸುವ ಖಾನೂನುಗಳೂ ಕಾಯಲ್ಪಡುವವು. ಕಮ್ಮಿ ಸಂಖ್ಯೆ ಕೋಮಿನವರ ರಾಜಕೀಯ ಮೊದಲಾದ ಹಕ್ಕುಗಳಭದ್ರತೆಯು ಮಧ್ಯವರ್ತಿ ಸರ್ಕಾರದ ಅಧೀನದಲ್ಲಿರುವವು.

ಒಲುಚಿಸ್ತಾನಕ್ಕೆ ಖಾನೂನು ಬದ್ಧವಾದ, ಕ್ರಮವಾದ ಆಡಳಿತೆ ಪದ್ಧತಿಯನ್ನು ಕೊಡಬೇಕು. ಇದನ್ನು ಸಾಧಿಸುವ ದಾರಿಯು ಇನ್ನು ಆಲೋಚಿಸಲ್ಪಡಲಾಗುವುದು.

ವಾಯವ್ಯ ಗಡೀ ಪ್ರಾಂತ್ಯಕ್ಕೂ ಬೇರೆ ಪ್ರಾಂತ್ಯಗಳ ಆಡಳಿತ ರಚನೆಯನ್ನೇ ಕೊಡಬೇಕು.

ಸರ್ಕಾರಿ ಉದ್ಯೋಗಗಳಿಗೆ ಜನರನ್ನು ಆರಿಸಲು ಒಂದು ಪಬ್ಲಿಕ್ ಸರ್ವಿಸ್ ಕಮಿಷನ್ ಇರತಕ್ಕದ್ದು. ಉದ್ಯೋಗಗಳ ಕಾರ್ಯದಕ್ಷತೆಯನ್ನು ಕಾಪಾಡುವುದೂ, ಎಲ್ಲಾ ಕೋಮುಗಳಿಗೆ ಸರಿಯೂದ ಅವಕಾಶ ದೊರೆಯುವಂತೆ ಮಾಡುವುದೂ ಈ ಕಮಿಷನಿನ ಧ್ಯೇಯವಾಗಿರಬೇಕು. ಈ ಕಮಿಷನಿನಲ್ಲಿ ಪ್ರಾಂತ್ಯದ ಮುಖ್ಯ ಕೋಮುಗಳೆಲ್ಲ ಪ್ರತಿನಿಧಿಗಳಿರತಕ್ಕದ್ದು. ಈ ಧ್ಯೇಯವನ್ನು ಸಾಧಿಸಲು ಒಂದು ರಚನೆಯನ್ನು ತಯಾರಿಸುವ ಬಗ್ಗೆ 3 ಹಿಂದುಗಳು, 2 ಮುಸಲ್ಮಾನರು, ಒಬ್ಬ ಸಿಕ್ಖ ಮತ್ತು ಒಬ್ಬ ಕ್ರಿಶ್ಚಿಯನ್ ಮೆಂಬರುಗಳುಳ್ಳ ಕಮಿಟಿಯನ್ನು ನೇಮಿಸತಕ್ಕದ್ದು.

ಮತ ಯಾ ಪ್ರಾಥಮಿಕ ಹಕ್ಕುಗಳ ಸಂಬಂಧದ ಖಾನೂನು ಕೌನ್ಸಿಲಿನಲ್ಲಿ ಮಂಜೂರಾಗಿ, ಸಂಬಂಧಪಟ್ಟ ಕೋಮಿನವರ ೪ ಮೆಂಬರುಗಳಿಂದ ವಿರೋಧಿಸಲ್ಪಟ್ಟರೆ, ಅದರ ರದ್ದಿಯಾತಿ ಬಗ್ಗೆ ಗವರ್ನರ್ ಜನರಲರು ಯಾ ಗವರ್ನರರಿಗೂ, ನಂತರ ಸುಪ್ರೀಮ್ ಕೋರ್ಟಿಗೂ ಅಪ್ಪೀಲು ಮಾಡುವ ಹಕ್ಕು ಆ ಕೋಮಿನವರಿಗೆ ಇದೆ.

ಬ್ರಿಟಿಷ್ ಸರ್ಕಾರದವರು ಕೋಮುವಾರು ತೀರ್ಮಾನವನ್ನು ಕೊಟ್ಟ ಮೊದಲು ಇದ್ದಂಥಾ ಜನಸಂಖ್ಯೆ ವಿರಿದ ಪ್ರಾತಿನಿಧ್ಯ (ವೈಟೇಜ್) ಮುಸಲ್ಮಾನರಿಗೆ ಇನ್ನು ಹತ್ತು ವರ್ಷಗಳ ವರೆಗೆ ಇರತಕ್ಕದ್ದು.

ಸೈನ್ಯ ಮತ್ತು ನ್ಯಾಯ ತೀರ್ಪಿನ ಇಲಾಖೆಗಳಿಗೆ ಜಾತಿ ಮತ ಪಾರ್ಟಿ, ಸ್ಥಳಗಳನ್ನೆಣಿಸದೆ ಯೋಗ್ಯತೆಯನ್ನನುಸರಿಸಿಯೇ ಉದ್ಯೋಗಸ್ಥರನ್ನು ನೇಮಿಸತಕ್ಕದ್ದು.

ಮಧ್ಯವರ್ತಿ ಕೌನ್ಸಿಲಿನಲ್ಲಿ ಬ್ರಿಟಿಷ್ ಇಂಡಿಯಾಕ್ಕೆ ದೊರೆಯುವ ಮೆಂಬರುತನಗಳಲ್ಲಿ ಶೇಕಡ 32ರಷ್ಟು ಮುಸಲ್ಮಾನರಿಗೂ, ಶೇಕಡ 4೭ರಷ್ಟು ಸಿಖ್ಖರಿಗೂ ಕಾಯ್ದಿಡಲ್ಪಡಬೇಕು.

ಜನರಿಗೆ ಜವಾಬ್ದಾರಿಯೂದಂಥ ಮತ್ತು ರಾಷ್ಟ್ರೀಯ ಸರ್ಕಾರಕ್ಕೆ ಇರಬೇಕಾದ ಸಂಪೂರ್ಣ ಹಕ್ಕುಗಳಿರುವ ಮಧ್ಯವರ್ತಿ ಸರ್ಕಾರದಿಂದಲೇ ಹಿಂದೀಯರಿಗೆ ತೃಪ್ತಿಯೂ, ಅವರ ಅಭಿವೃದ್ಧಿಯೂ ಆಗುವ ಕಾರಣ, ಹಿಂದೂದೇಶದ ಹಿತದಲ್ಲಿ ಅವಶ್ಯವಿರುವ ಭದ್ರತೆಗಳನ್ನು ಇಟ್ಟುಕೊಂಡು ಇಂಡಿಯಾ ಸರ್ಕಾರದ ಅಧಿಕಾರವನ್ನು ಹಿಂದೀಯರಿಗೆ ಬಿಟ್ಟುಕೊಡತಕ್ಕದ್ದೆಂದು ಈ ಸಭೆಯ ತೀರ್ಮಾನವಾಗಿದೆ.

ಈ ಒಪ್ಪಂದದ ಶರತ್ತುಗಳು ಒಂದಕ್ಕೊಂದು ಸಂಭಂದಿಸಿರುವುದರಿಂದ ಇದನ್ನು ವಿಂಗಡಿಸಲಾಗುವುದಿಲ್ಲ; ಮತ್ತು ಇಡನ್ನು ಒಟ್ಟಾಗಿ ಜಾರಿಗೆ ತರತಕ್ಕದ್ದು.

ಪ್ರಾಂತೀಕ ಸರ್ಕಾರಗಳಿಗೆ ಅಧಿಕಾರವಿರುವ ವಿಷಯಗಳ ಪಟ್ಟಿಯನ್ನು ವಿವರವಾಗಿ ತಯಾರಿಸಿ, ಸದರಿ ಅಧಿಕಾರಗಳನ್ನು ಆಯಾಯ ಪ್ರಾಂತೀಕ ಸರ್ಕಾರಗಳು ನಡಿಸತಕ್ಕದ್ದು. ಹೊಸ ವಿಷಯಗಳಲ್ಲಿ ಸಂಶಯ ಬಂದರೆ ಸುಪ್ರೀಮ್ ಕೋರ್ಟು ತೀರ್ಮಾನಿಸತಕ್ಕದ್ದು. ಅಂಥಾ ತೀರ್ಮಾನದ ವರೆಗೆ ಇಂಡಿಯಾ ಸರ್ಕಾರ ಹುಕುಮನ್ನು ನಡಿಸತಕ್ಕದ್ದು.

ಜಾತಿಗಳಿಗೆ ಅನ್ವಯಿಸುವ ಖಾನೂನುಗಳನ್ನು ಸಂಬಂಧಪಟ್ಟ ಕೋಮಿನ ಪ್ರತಿನಿಧಿಗಳ ಮತ್ತು ಜನಸಮುದಾಯದ ಒಪ್ಪಿಗೆ ಇಲ್ಲದೆ ಬದಲಾಯಿಸಕೂಡದು. ಮುಸಲ್ಮಾನರಿಗೆ ಅನ್ವಯಿಸುವ ಖಾನೂನುಗಳನ್ನು ಇಸ್ಲಾಮಿಕ್ ಶಾಸ್ತ್ರಗಳಿಗೆ ವಿರೋಧವಾಗಿ ಬದಲಾಯಿಸಕೂಡದು.

ಮಧ್ಯವರ್ತಿ ಸರ್ಕಾರದ ಮಂತ್ರಿಮಂಡಳಿಯಲ್ಲಿ ಮುಸಲ್ಮಾನ್, ಸಿಕ್ಖ್ ಮತ್ತು ಸಾಧ್ಯವಾದಷ್ಟು ಹೆಚ್ಚು ಸಂಖ್ಯೆಯಮೈನಾರ್ಟಿ ಕೋಮಿನವರ ಪ್ರತಿನಿಧಿಗಳು ಇರುವಂತೆ ಪದ್ಧತಿ ಮಾಡಿಕೊಳ್ಳಬೇಕು. 10 ವರ್ಷಗಳ ವರೆಗೆ ಒಬ್ಬ ಸಿಕ್ ಮಂತ್ರಿ ಇದ್ದೇ ಇರಬೇಕು.

ಪ್ರಾಂತೀಕ ಮಂತ್ರಿ ಮಂಡಳಿಗಳಲ್ಲಿ ಪ್ರಾಮುಖ್ಯವಾದ ಮೈನಾರ್ಟಿ ಕೋಮುಗಳ ಪ್ರತಿನಿಧಿಗಳು ಇರುವ ಪದ್ಧತಿಯೂ ಮಾಡಿಕೊಳ್ಳಬೇಕು.

ಎಲ್ಲಾ ಚುನಾವಣೆಗಳು ಮಿಶ್ರ ಚುನಾವಣೆ ರೀತಿಯಿಂದಲೇ ಆಗಬೇಕು. ಆದರೆ 10 ವರ್ಷಗಳ ವರೆಗೆ ಈ ಕೆಳಗಿನ ರೀತಿಯನ್ನು ಅನುಸರಿಸತಕ್ಕದ್ದು.

ತನ್ನ ಕೋಮಿನವರ ಕಮ್ಮಿ 30% ಓಟು ಪಡೆದು, ಮಿಶ್ರ ಚುನಾವಣೆಯಲ್ಲಿ ಬೇರೆಯವರಿಗಿಂತ ಹೆಚ್ಚು ಓಟು ಪಡೆಯುವವನು ಆರಿಸಲ್ಪಡುವನು.

ತನ್ನ ಕೋಮಿನ 30% ಓಟು ದೊರೆಸವನು ಇಲ್ಲದೆ ಹೋದರೆ, ಆ ಕೋಮಿನ ಎಲ್ಲರಿಗಿಂತಲೂ ಹೆಚ್ಚು ಓಟು ಪಡೆದು, ಮಿಶ್ರ ಚುನಾವಣೆಯಲ್ಲಿ ಬೇರೆಯವರಿಗಿಂತ ಹೆಚ್ಚು ಓಟು ಪಡೆದವನು ಜಯಶೀಲನಾಗುವನು.

10 ವರ್ಷಗಳ ಅಂತ್ಯದಲ್ಲಿ 30% ಓಟುಗಳ ಪದ್ಧತಿಯು ರದ್ದಾಗುವುದು. ಅದಕ್ಕೆ ಮೊದಲು ಇಷ್ಟವಿರುವ ಕೋಮಿನವರು ಈ ಪದ್ಧತಿಯನ್ನು ರದ್ದುಮಾಡಿಸಿಕೊಳ್ಳಬಹುದು.

ಬಂಗಾಳ, ಪಂಜಾಬು ಮತ್ತು ಸಿಂಧ್ ಪ್ರಾಂತ್ಯಗಳ ಒಪ್ಪಂದದ ಶರತ್ತುಗಳು ಈ ವೇಳೆಗೇ ಪ್ರಕಟಿಸಲ್ಪಟ್ಟಿವೆ.

ಈ ತಾ. 17 ರಲ್ಲಿ ಈ ಪ್ರಾಮುಖ್ಯ ತೀರ್ಮಾನವು ಆದ ಕೂಡಲೆ ಮಹಾತ್ಮ ಗಾಂಧಿಯವರು, ಪಂಡಿತ ಜವಾಹರ್‌ಲಾಲ್ ನೆಹರು, ಸರ್ ತೇಜ್‌ಬಹದ್ದೂರ್ ಸಪ್ರು, ಸದರಿ ಸಭೆಯ ಅಧ್ಯಕ್ಷರಾಗಿದ್ದು ಸ್ವಲ್ಪ ಮೊದಲು ಹೊರಟು ಹೋಗಿದ್ದ ವಿಜಯರಾಘವಾಚಾರ್ಯರು ಮೊದಲಾದವರಿಗೆ ತಂತೀ ವಾರ್ತೆ ಕಳುಹಿಸಲಾಯಿತು. ಪಂಡಿತ ಮದನಮೋಹನ ಮಾಳವೀಯರ ಸೋಲರಿಯದ ಪ್ರಯತ್ನಗಳೇ ಈ ಚಿರತ್ಕಾರ್ಹವಾದ ಒಪ್ಪಂದಕ್ಕೆ ಕಾರಣವೆಂದು ಹಲವರ ಅಭಿಪ್ರಾಯ. ಈ ಮೊದಲು ಯಾರೂ ಯೋಚಿಸದೆ ಇದ್ದಂಥ ಈ ವಿಶೇಷ ಜಯಕ್ಕೆ ಸಂತೋಷವನ್ನು ಸೂಚಿಸಿಯೂ, ಈ ಒಪ್ಪಂದವನ್ನು ಹೊಗಳಿಯೂ ಡಾ. ಮಹಮ್ಮದ್, ನವಾಬು ಮಹಮ್ಮದ್ ಇಸ್ಮೈಲ್, ಮೌಲಾನ ಅಬುಲ್ ಕಲಂ ಆಜಾದ್, ಪಂಡಿತ ಗೋವಿಂದ ಮಾಳವೀಯ, ಮೌಲಾನ ಜಾಫರ್ ಅಲಿಖಾನ್, ಮೆ. ಸಿ. ಯಫ್ ಆಂಡ್ರೂಸ್, ಶೇಕ್ ಅಬ್ದುಲ್ ಮಜೀದ್, ಮೌಲಾನ ಶೌಕತ್‌ಅಲಿ, ಸಯ್ಯದ್ ಮಹ್ಮದ್ ಹುಸ್ಸೇನ್, ಡಾ. ಅನ್ಸಾರಿ, ಸಿ. ರಾಜಗೋಪಾಲಾಚಾರಿ ಮೊದಲಾದ ಮುಂದಾಳುಗಳು ಅಭಿಪ್ರಾಯ ಸೂಚಿಸಿರುವರು.

ಅಖಿಲ ಕೊಡಗು ಉಪಾಧ್ಯಾಯರ ಸಂಘದ ಸಮ್ಮೇಳನ.

ಅಖಿಲ ಕೊಡಗು ಉಪಾಧ್ಯಾಯರ ಸಂಘದ ನಾಲ್ಕನೆಯ ವಾರ್ಷಿಕ ಸಮ್ಮೇಳನವು ಮೆ. ಎ ರಾಮರಾಯರು ಎ. ಇ. ಎಸ್. ರವರ ಅಧ್ಯಕ್ಷತೆಯಲ್ಲಿ ಬರುವ ಡಿಸೆಂಬರು 3, 4 & 5ನೇ ನಾಪೋಕ್ಲು ವೋಡಲ್ ಶಾಲೆಯಲ್ಲಿ ಜರುಗುವುದು. ಈ ಸಮ್ಮೇಳನಕ್ಕೆ ಸಂಘದ ಸದಸ್ಯರಿಗೂ, ಇತರ ಮಹಿಳೆ ಮಹನೀಯರಿಗೂ ಸುಸ್ವಾಗತವಿದೆ. ಸರ್ವರೂ ದಯವಿಟ್ಟು ಆಗಮಿಸಬೇಕೆಂದು ಕೋರುತ್ತೇವೆ.

ಕಾರ್ಯಕ್ರಮ.

ಡಿಸೆಂಬರ್ 3ನೇ ಶನಿವಾರ.

10 ಪೂ.—12.30 ಅ.—ಅಖಿಲ ಕೊಡಗು ಉಪಾಧ್ಯಾಯರ ಸಹಕಾರಿ ಸ್ಟೋರಿನ ವಾರ್ಷಿಕ ಅಧಿವೇಶನ. ಅಧ್ಯಕ್ಷರು—ಮೆ. ಎ ಬಿ. ಚಂಗಪ್ಪನವರು, ಯಂ. ಎಲ್. ಸಿ.

2 ಅ.—4 30 ಅ.—ಅಖಿಲ ಕೊಡಗು ವಿದ್ಯಾ ಇಲಾಖೆ ಉದ್ಯೋಗಸ್ಥರ ಸಹಕಾರಿ ಸಂಘದ ವಾರ್ಷಿಕ ಸಮ್ಮೇಳನ. ಅಧ್ಯಕ್ಷರು—ಮೆ. ಪಿ. ಎ ಚಂಗಪ್ಪನವರು, ಯಂ. ಎಲ್. ಸಿ.

ಡಿಸೆಂಬರ್ 4ನೇ ಆದಿತ್ಯವಾರ.

8 30 ಪೂ.—12.30 ಅ.—ಓಟಗಳ ಸ್ಪರ್ಧೆಗಳು (ಶಾಲೆಯ ಮೈದಾನದಲ್ಲಿ.)

2 ಅ.—3 ಅ.—ಪ್ರದರ್ಶನ ತೆರೆಯುವ ಸಮಾರಂಭ ತೆರೆಯುವವರು—ರಾ. ಬಾ. ಕೆ. ಚಂಗಪ್ಪನವರು, ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ್, ಕೊಡಗು

3 ಅ.—4 30 ಅ.—ವಾರ್ಷಿಕ ಸಮ್ಮೇಳನವನ್ನು ತೆರೆಯುವಿಕೆ.

5 ಅ.—7.30 ಅ.—ಬಿಸ್‌ನೆಸ್ ಎಂಟಿಂಗ್ (ಸದಸ್ಯರಿಗೆ ಮಾತ್ರ).

9 ಅ.—12 ಅ.—ನಾಟಕ "ವೀರರಾಜೇಂದ್ರ ವಿಜಯ" (ಪ್ರವೇಶವು ಟಿಕೇಟುಗಳ ಮೂಲಕ).

ಡಿಸೆಂಬರ್ 5ನೇ ಸೋಮವಾರ.

8 ಪೂ.—9 30 ಬಿಸ್‌ನೆಸ್ ಎಂಟಿಂಗ್ (ಸದಸ್ಯರಿಗೆ ಮಾತ್ರ).

9.30 ಪೂ.—10 ಪೂ.—ಪಾಠ "ಭೂಗೋಳ" ಐದನೇ ತರಗತಿಗೆ. ಮೆ. ಬಿ. ಎಸ್. ಕುಶಾಲಪ್ಪನವರು, ಬಿ. ಎ. ಡಿ. ಇ. ಡಿಪ್ಟಿ ಇನ್‌ಸ್ಪೆಕ್ಟರು, ಕೊಡಗು.

10 ಪೂ.—10 40 ಪೂ.—ಪಾಠ "ಇಂಗ್ಲಿಷ್" ಆರನೇ ತರಗತಿಗೆ. ಮೆ. ಕೆ. ಪಿ. ಮುತ್ತಣ್ಣನವರು, ಬಿ. ಎ. ಎಲ್ ಟಿ.

10.40 ಪೂ.—12 30 ಅ.—ಚರ್ಚೆ—"ಶಾಲೆಗಳಲ್ಲಿ ಮತ ಸಂಬಂಧದ ಶಿಕ್ಷಣವನ್ನು ಕೊಡಬೇಕೆಂದು ಸಂಘವು ಅಭಿಪ್ರಾಯ ಪಡುತ್ತದೆ."
ಪ್ರಾರಂಭಕ—ಮೆ. ಟಿ. ಎಸ್. ಕಾರ್ಯಪ್ಪನವರು, ಬಿ. ಎ.
ವಿರೋಧಿ—ಮೆ. ಬಿ. ಎಸ್. ಕುಶಾಲಪ್ಪನವರು, ಬಿ. ಎ. ಡಿ. ಇ.

2 ಅ.—2 45 ಅ.—ಭಾಷಣ "Modern Tendencies in Teaching." ಮೆ. ಎಫ್. ಎಫ್. ಸಿ. ಎಡ್ಮಂಡ್ಸ್‌ರವರು, ಎಮ್. ಎ., ಬಿ. ಎಸ್. ಸಿ. ಕೊಡಗು—ಬೆಂಗಳೂರು ಶಾಲಾ ಇನ್‌ಸ್ಪೆಕ್ಟರು.

2.45 ಅ.—3.30 ಅ.—ಭಾಷಣ "ಮಕ್ಕಳ ಶಿಕ್ಷಣ" ಮೆ. ಎನ್. ಎಸ್. ನಾರಾಯಣ ಶಾಸ್ತ್ರಿ, ಯಂ. ಎ. ಲೆಕ್ಚರರು, ಮಹಾರಾಜಾ ಕಾಲೇಜು, ಮೈಸೂರು.

3.30 ಅ.—4 15 ಅ.—ಭಾಷಣ 'ಪ್ರಪಂಚದ ಕ್ರಾಂತಿಯೂ, ಉಪಾಧ್ಯಾಯರ ಕರ್ತವ್ಯಗಳೂ.' ಮೆ. ಪಿ. ಸಿ. ಉತ್ತಯ್ಯನವರು, ಬಿ ಎ, ಎಲ್. ಟಿ. ಮುಖ್ಯೋಪಾಧ್ಯಾಯರು, ಗವರ್ನಮೆಂಟ್ ಹೈಸ್ಕೂಲ್, ವೀರಾಜಪೇಟೆ

4.15 ಅ.—4.30 ಅ.—'ಮಲೇರಿಯವನ್ನು ಕುರಿತ ಹಾಡುಗಳು' ಶ್ರೀ ಸ್ವಾಮಿ ಶಾಂಭವಾನಂದಜಿಯವರು, ಪೊನ್ನಂಪೇಟೆ.

4.30 ಅ.—5 ಅ.—ಅಧ್ಯಕ್ಷರ ಕೊನೆಯ ಭಾಷಣ.
ವಂದನಾರ್ಪಣ

9 ಅ.—12 ಅ.—ನಾಟಕ (ಸದಸ್ಯರಿಗೆ ಮಾತ್ರ).

ವೀರಾಜಪೇಟೆ,
ತಾ. 21—11—32.

ಪಿ. ಯಂ. ಉತ್ತಪ್ಪ,
(ಸಂಘದ ಅಧ್ಯಕ್ಷ)

1—1

ಅಸ್ಪೃಶ್ಯತಾ ನಿವಾರಣೆ.

ಮಹಾತ್ಮಗಾಂಧಿಯವರ ಒಂಭತ್ತನೇ ಪತ್ರ.

ನನಗೆ ಬರುವ ಸವಾಲುಗಳಲ್ಲಿ ಇದೊಂದಾಗಿದೆ. 'ನೀವು ಶಾಸ್ತ್ರಗಳಲ್ಲಿ ನಂಬಿಕೆ ಇರುವವರು ಎಂದು ಹೇಳುತ್ತೀರಿ; ಹೀಗೆಂದೇನೆಂತ ಗೊತ್ತಾಗುವುದಿಲ್ಲ. ಯಾಕೆಂದರೆ ಶಾಸ್ತ್ರಗಳಲ್ಲಿ ಹೇಳುವ ಅನೇಕ ಸಂಗತಿಗಳನ್ನು ನೀವು ತಿರಸ್ಕರಿಸುತ್ತೀರಿ. ನೀವು ಆಗಾಗ್ಗೆ ನಮೂದಿಸುವ ಗೀತೆಯು ಸಹ ಶಾಸ್ತ್ರವನ್ನು ಸರಿಸಬೇಕೆಂತ ಹೇಳಿದೆ.'

ನಾನು ಈ ಮೊದಲು ಬರೆದ ಒಂದು ಪತ್ರದಲ್ಲಿ ಹೇಳಿರುವ ಮೇರೆ ಗೀತೆಯ ಮುಖ್ಯ ಉದ್ದೇಶಕ್ಕೆ ವಿರೋಧವಾದಂಥಾದ್ದನ್ನು ಎಲ್ಲಿಯೇ ಅದು ಪ್ರಿಂಟಾಗಿಂಲಿ ಅದನ್ನು ಶಾಸ್ತ್ರವೆಂದು ನಾನು ಅಂಗೀಕರಿಸಲಾರೆ. ಹಳೇ ಪದ್ಧತಿಗಳನ್ನು ಬಡದಿರುವವರಿಗೆ ಬೇಸರವಾಗುವುದಿಲ್ಲವಾದರೆ ನನ್ನ ಅರ್ಥವನ್ನು ಇನ್ನೂ ಸ್ಪಷ್ಟೀಕರಿಸುತ್ತೇನೆ. ಸರ್ವರಿಂದಲೂ ಮನ್ನಿಸಲ್ಪಡುವ ಮೂಲ ನೀತಿಗಳಿಗೆ ವಿರೋಧವಾದದ್ದನ್ನು ನಾನು ಶಾಸ್ತ್ರವೆಂತ ಅಂಗೀಕರಿಸುವುದಿಲ್ಲ. ಶಾಸ್ತ್ರಗಳು ಮೂಲ ನೀತಿಗಳಿಗೆ ವಿರೋಧಿಸಲು ಉಂಟಾದುವಲ್ಲ. ಅವುಗಳನ್ನು ಸಾಧಿಸಲಿಕ್ಕಾಗಿಯೇ ಆದವು. ಗೀತೆಯೇ ನನಗೆ ಸಮಸ್ತ ಶಾಸ್ತ್ರವಾಗಿದೆ. ಯಾಕೆಂದರೆ, ಅದು ಮೂಲ ನೀತಿಗಳನ್ನು ಬೋಧಿಸುವುದು ಮಾತ್ರವಲ್ಲದೆ, ಅವುಗಳನ್ನು ಸರ್ವ ರೀತಿಯಿಂದಲೂ ಯಾಕೆ ಸಾಧಿಸಬೇಕೆಂತ ಕಾರಣಗಳನ್ನು ಸಹ ಕೊಡುತ್ತದೆ. ಈಗ ನಾನು ಸೂಚಿಸಿದ ಉತ್ತಮ ಸೂತ್ರವನ್ನು ಅನುಸರಿಸದಿದ್ದರೆ, ಶಾಸ್ತ್ರ ತಿಳಿಯದ ನನ್ನಂಥಾವನಿಗೆ, ಒಂದಕ್ಕೊಂದು ವಿರೋಧವಾದ ಆಧಾರಾಗಳಿಂದ, ಸೊಗಸಾಗಿ ಅಚ್ಚಾದ, ಇನ್ನೆನ್ನೆ ಸೊಗಸಾಗಿ ಬೈಂಡು ಕಟ್ಟಿರುವೆ, ಒಬ್ಬರೊಬ್ಬರಿಗೆ ವಿರೋಧಿಸುವ ಪಂಡಿತರು ದೇವರಿಂದಲೇ ನಿರ್ಮಾಣವಾದದ್ದನ್ನವ, ಸಂಸ್ಕೃತ ಗ್ರಂಥಗಳ ಕಾಡಿನಲ್ಲಿ ದಿಕ್ಕು ತೋರದೆ ಹೋಗುವುದೇ ಖಂಡಿತ.

ನೂರಾರು ಜನರಿಗೆ ಮಾತ್ರ ತಿಳಿದಿರುವ ಎಷ್ಟೋ ಸ್ಮೃತಿಗಳಿವೆ. ಅಂಥಾವನ್ನು ಬರೆದದ್ದು ಯಾರು, ಯಾವಾಗ ಎಂತ ಯಾರೂ ಹೇಳಲಾರರು. ಅಂಥಾ ಒಂದು ಗ್ರಂಥವನ್ನು ನಾನು ದಕ್ಷಿಣ ದೇಶದಲ್ಲಿ ನೋಡಿದೆ. ತಿಳಿದ ಪಂಡಿತರನ್ನು ಕೇಳುವಾಗ ಅದರ ವಿಷಯ ನನಗೆ ಗೊತ್ತಿಲ್ಲವೆಂದರು. ಒಂದಕ್ಕೊಂದು ವಿರೋಧವಿರುವ ಅನೇಕ ಆಗಮಗಳಿವೆ. ಅವುಗಳನ್ನು ಅನುಸರಿಸುವ ಚಿಕ್ಕ ಹೂಟದ ಜಾತಿ ಅವನ್ನು ಕೇಳುವುದಿಲ್ಲ. ಈ ಎಲ್ಲಾ ಗ್ರಂಥಗಳೂ ಹಿಂದೂಗಳಿಗೆ ಸಂಬಂಧಿಸುವವು ಎನ್ನುವುದಾದರೆ ಯಾವ ದುರಾಚಾರಕ್ಕಾದರೂ ಶಾಸ್ತ್ರದ ಆಧಾರವಿಲ್ಲವೆಂತ ಹೇಳಲು ಸಾಧ್ಯವಿಲ್ಲ. ಪುರಾತನ ಕಾಲದಿಂದಾದ ಕೈ ಬರಹದ ಗ್ರಂಥಗಳಲ್ಲಿ ಬೋಧಿಸುವ ನೀತಿಗಳಿಗೆ ವಿರೋಧವಾದ ಅನೀತಿಗಳನ್ನು ಸರಯಿಸುವ ಶ್ಲೋಕಗಳೂ ಅಂಥಾ ಗ್ರಂಥಗಳಲ್ಲಿರುತ್ತವೆ. ಭಗವದ್ಗೀತೆಯಲ್ಲಿ ಒಂದೇ ಕಡೆಯಲ್ಲಿರುವ ಶಾಸ್ತ್ರ ಎಂಬ ಶಬ್ದಕ್ಕೆ ಗೀತೆಯಿಂದ ಹೊರಗಿರುವ ಗ್ರಂಥಗಳೆಂತ ನಾನು ಒಪ್ಪುವುದಿಲ್ಲ. ಉದಾಹರಣೆಯಿಂದ ಸ್ಥಾಪಿಸಲ್ಪಟ್ಟಿರುವ ಒಳ್ಳೇ ನೀತಿಗಳೆಂಬ ಅರ್ಥ. ಇದು ಟೀಕಾಕಾರರಿಗೆ ತೃಪ್ತಿಯನ್ನುಂಟುಮಾಡಲಾರದು ಶಾಸ್ತ್ರ ತಿಳಿಯದವನಾದ ನಾನು ಯಾರಿಗೂ ಬೋಧಕನಾಗಿರಲಾರೆನು. ಅಂದರೆ ತಿಳಿಯಬೇಕೆನ್ನುವವರಿಗೆ, 'ಶಾಸ್ತ್ರ'ವೆಂದರೆ ಏನೆಂತ ನಾನು ತಿಳಿದಿದ್ದೇನೆಂತ ಮಾತ್ರ ಹೇಳಬಲ್ಲೆನಷ್ಟೆ.

ಇನ್ನೂ ಬಲವಾಗಿ ಕೇಳುವ ಇನ್ನೊಂದು ಪ್ರಶ್ನೆ ಯಾವುದೆಂದರೆ—'ದೈವೀ ಸೂಚನೆ, ಅಥವಾ ಅಂತರಾತ್ಮನ ಬೋಧನೆ' ಎಂದರೇನು? ಪ್ರತಿಯೊಬ್ಬನೂ ತನ್ನ ತನ್ನ ಅಂತರಾತ್ಮ ಬೋಧನೆಯಂತೆ ತನ್ನ ನೆರೆಯವರ ರೀತಿಗೆ ವಿರೋಧವಾಗಿ ನಡೆಯಲು ಪ್ರಾರಂಭಿಸಿದರೆ ಪ್ರಪಂಚವು ಏನಾದೀತು?' ಇದು ನ್ಯಾಯವಾದ ಸವಾಲೇ. ದೇವರು ಆತ್ಮ ರಕ್ಷಣೆಗೆ ಭದ್ರತೆಯನ್ನು ಏರ್ಪಡಿಸದಿದ್ದರೆ ಕಷ್ಟವಾಗುತ್ತಿತ್ತು. ಅಂಥಾ ಅಂತರಾತ್ಮನ ಬೋಧನೆ ತನಗೂ ಇದೆಯೆಂತ ಪ್ರತಿಯೊಬ್ಬನೂ ಹೇಳಬಹುದು. ಆದರೆ ಅದನ್ನು ನಿಜವೆಂತ ಹೇಳುವವರು ಕಡಿಮೆ ಸಂಖ್ಯೆ ಇರಬಹುದು. ದೈವೀ ಆಜ್ಞೆಯಿಂದ ಅಥವಾ ಅಂತರಾತ್ಮನ ಬೋಧನೆಯಂತೆ ನಡೆಯುವುದೆಂತ ಸುಳ್ಳಾಗಿ ಹೇಳುವವನು, ಪ್ರಾಪಂಚಿಕ ರಾಜನ ಹೇಳಿಕೆ ಮೇರೆ ನಡಕೊಳ್ಳುವದೆಂತ ಸುಳ್ಳಾಗಿ ಹೇಳುವವನಿಗಿಂತ ಕಷ್ಟಕ್ಕೆ ಗುರಿಯಾದಾನು. ರಾಜನ ಹೇಳಿಕೆಯಂತೆ ನಡೆಯುತ್ತೇನೆಂತ ಹೇಳುವವನು ಬರೇ ಕಾಯಿಕ ಶಿಕ್ಷೆಯನ್ನು ಅನುಭವಿಸಿ ತಪ್ಪಿಸಿಕೊಳ್ಳಬಹುದು. ಆದರೆ ದೇವರ ಅನುಜ್ಞೆಯಂತೆ ನಡೆಯುತ್ತೇನೆಂತ ಸುಳ್ಳು ಹೇಳುವವನು ದೇಹ ಆತ್ಮಸಮೇತ ನಾಶವಾಗುತ್ತಾನೆ.

ದಯವಿಟ್ಟು ಟೀಕಾ ಕಾರರು ನಾನು ಮೋಸಗೊಳಿಸುತ್ತೇನೆಂತ ಹೇಳುವುದಿಲ್ಲ. ಆದರೆ ಏನೋ ಭ್ರಮೆಗೆ ಒಳಗಾಗಿರಬಹುದೆನ್ನುತ್ತಾರೆ. ಹಾಗಾಗಲಿದೂ ನನ್ನ ಭಾಗಕ್ಕೆ ಸುಳ್ಳು ತನದಿಂದ ದೊಡ್ಡಸ್ತಿಕೆಯನ್ನು ಮಾಡಿಕೊಂಡಷ್ಟೇ ಕಷ್ಟ ಪರಿಣಾಮವಾಗುತ್ತದೆ. ನನ್ನಂಥ ನಮ್ರ ಸತ್ಯಶೋಧಕನು ಬಹಳ ಜಾಗರೂಕತೆಯಿಂದಿದ್ದು, ಮನಸಿನ ಸ್ಥಿರತೆಯನ್ನು ಕಳಕೊ

ಳ್ಳಬಾರದು. ದೇವರ ಸಲಹೆ ದೊರೆಯಬೇಕಾದರೆ ನಮ್ಮ ವ್ಯಕ್ತಿತ್ವವನ್ನು ಸಂಪೂರ್ಣವಾಗಿ ಕಳೆದುಕೊಳ್ಳಬೇಕು. ಈ ವಿಷಯ ಇನ್ನು ಹೆಚ್ಚಿಗೆ ಹೇಳಬೇಕಾಗಿಲ್ಲ. ನನಗೆ ಅಂತರಾತ್ಮನ ಸಲಹೆ ಇದೆಯೆಂತ ಅಥವಾ ದೇವರ ಸಲಹೆ ಇದೆಯೆಂತ ಹೇಳುವುದೇನೂ ಅದ್ಭುತವಲ್ಲ. ಅದು ನನಗೆ ಮಾತ್ರ ಆಗಬಹುದಾದ ವಿಷಯವಲ್ಲ. ಏನೂ ಬಾಕಿ ಮಾಡಿಕೊಳ್ಳದೆ ಸಂಪೂರ್ಣವಾಗಿ ದೇವರಲ್ಲಿ ಶರಣಾಗತರಾದವರ ಜೀವನವನ್ನು ದೇವರೇ ನಡೆಸುತ್ತಾನೆ. ಸಂಪೂರ್ಣವಾಗಿ ಆಸಕ್ತಿಯನ್ನು ಬಿಟ್ಟವರ ಅಂದರೆ ಸಂಪೂರ್ಣವಾಗಿ ನಾನು ಎಂಬುದನ್ನು ಮರೆತವರ ಮೂಲಕ ದೇವರು ಕೆಲಸ ಮಾಡಿಸುತ್ತಾನೆಂತ ಗೀತೆಯಲ್ಲಿ ಹೇಳಿದೆ. ಇದರಲ್ಲಿ ಭ್ರಮೆ ಏನೂ ಇಲ್ಲ. ಈ ಅರ್ಹತೆಯನ್ನು ಪಡೆಯಲು ಮನಸ್ಸು, ದೃಢ ನಿಶ್ಚಯವೂ ಇರುವವರು ಅಜಮಾಯಿಸಿ ನೋಡಬಹುದಾದಂಥ ವೈಜ್ಞಾನಿಕ ಸತ್ಯವನ್ನೇ ನಾನು ಹೇಳಿರುವುದಾಗಿದೆ. ಮನಸಿದ್ದರೆ ಸುಲಭವಾಗಿ ತಿಳಿದುಕೊಂಡು ಸಾಧಿಸಬಹುದಾದಂಥ ಸಂಗತಿಯಾಗಿದೆ.

ನಾನು ನನ್ನ ಕಾರ್ಯಗಳಿಗೆ ದೇವರ ಆಜ್ಞೆ ಇದೆಯೆಂತ ಹೇಳುವುದನ್ನು ಯಾರೂ ಮನಸಿಗೆ ತೆಗೆದುಕೊಳ್ಳಬೇಕಾದದ್ದಿಲ್ಲ. ನಾನು ಹೇಳುವ ಮಾತುಗಳನ್ನು ಕಾರಣ ಯುಕ್ತವೋ ಅಲ್ಲವೋ ಎಂಬುದನ್ನು ಅಜಮಾಯಿಸಿ ನೋಡಬಹುದು. ನಾನು ಈ ಪ್ರಪಂಚದಿಂದ ಕಣ್ಮರೆಯಾದರೂ ಅಸ್ಪೃಶ್ಯತೆಯು ನಿವಾರಣೆಯಾಗಲೇ ಬೇಕು. ಉಪವಾಸಕ್ಕೆ ದೇವರ ಆಜ್ಞೆ ಇದೆಯೋ ಇಲ್ಲವೋ ಎಂಬದು ನನ್ನ ಸಮೀಪ ಜೊತೆಗಾರರಿಗೂ ಸಹ ಏನೂ ಯೋಚನೆಗೆ ಕಾರಣ ಕೊಡಬಾರದು. ನನ್ನ ಮೇಲೆ ಪ್ರೀತಿಗಾಗಿಯಾದರೂ ಇಮ್ಮಡಿ ಉತ್ಸಾಹದಿಂದ ಕೆಲಸ ಮಾಡಬೇಕು. ಹಟಗಾರನಾದ ಸ್ನೇಹಿತನು ಮಾಡಿದ ಉಪವಾಸವು ಬರೇ ಹುಚ್ಚುತನದ್ದಿಂತಾದರೂ ಯಾವ ಕೇಡೂ ಸಂಭವಿಸುವುದಿಲ್ಲ. ನನ್ನ ಮೇಲೆ ನಂಬಿಕೆಯಾಗಲೀ, ಪ್ರೀತಿಯಾಗಲೀ ಇಲ್ಲದವರಿಗೆ ನನ್ನ ಉಪವಾಸದಿಂದ ಏನೂ ತೊಂದರೆಯಾಗುವುದಿಲ್ಲ. ನನ್ನ ಉಪವಾಸವನ್ನು ಕುರಿತಾಗಲೀ, ಅವಕ್ಕೆ ಕಾರಣವೇನೆಂಬದನ್ನಾಗಲೀ ಯೋಚಿಸುತ್ತಾ, ಕೂತರೆ ಜನಾಂಗವು ಕೈಕೊಂಡಿರುವ ಮುಖ್ಯ ಕಾರ್ಯವು ಹಿಂದೆ ಬೀಳಬಹುದು.

ಕೊಡಗಿನ ಭವಿಷ್ಯತ್ತಿನ ವಿಷಯ.

ಸೋಮವಾರಪೇಟೆ ನಾಡವರ ವಿಂಟಿಂಗು.

ತಾ. 12—11—32ರಲ್ಲಿ ಯಡೂರು ಗ್ರಾಮದ ಗುಂಡ್ಯ ಪುರದ ಬಾಣೆಯಲ್ಲಿ ನಾಡಿನ ಸುಮಾರು 300 ಜನರು ಸೇರಿ ಮೆ. ಹರಗದ ಅಪ್ಪಯ್ಯನವರ ಅಧ್ಯಕ್ಷತೆಯಲ್ಲಿ ವಿಂಟಿಂಗು ನಡಿಸಿ, ಕೊಡಗಿನ ಭವಿಷ್ಯತ್ತನ್ನು ಕುರಿತು ದೀರ್ಘ ಚರ್ಚೆ ನಡೆದು ಮೆ. ಚೌಡ್ಲು ಕಾಳಪ್ಪನವರು, ನಾಡಿನ ಪ್ರತಿಯೊಂದು ಗ್ರಾಮದಲ್ಲಿ ವಿಂಟಿಂಗು ಮಾಡಿ, ಎಲ್ಲಾ ಗ್ರಾಮಗಳಿಂದ ಪ್ರತಿನಿಧಿಗಳನ್ನು ಆರಿಸಿಕೊಂಡು ತಾ. 20—11—32ರಲ್ಲಿ ಇದೇ ಜಾಗಕ್ಕೆ ವಿಂಟಿಂಗಿಗೆ ಬರಜೇಕಾಗಿ ಸೂಚಿಸಿದ ಮೇರೆ ಸರ್ವಸಮ್ಮತದಿಂದ ಎಲ್ಲರೂ ಒಪ್ಪಿಗೆ ಕೊಟ್ಟರು. ಈ ಮೇರೆ ತಾ. 20—11—32ರಲ್ಲು ನಾಡಿನ ಎಲ್ಲಾ ಗ್ರಾಮಗಳ ಪ್ರತಿನಿಧಿಗಳು ಸುಮಾರು 150 ಜನರು ಸೇರಿ ಮೆ.. ಹರಗದ ಅಪ್ಪಯ್ಯನವರ ಅಧ್ಯಕ್ಷತೆಯಲ್ಲಿ ವಿಂಟಿಂಗು ನಡಿಸಿದರು.

ನಾಡಿನ ಎಲ್ಲಾ ಗ್ರಾಮಸ್ಥರು ಆಯಾಯ ಗ್ರಾಮಗಳಲ್ಲಿ ವಿಂಟಿಂಗ್ ನಡಿಸಿ ತಂದ ಪ್ರೊಸೀಡಿಂಗ್ಸ್‌ಗಳನ್ನು ಮೆ. ಹರಗದ ಮುತ್ತಣ್ಣನವರು ಓದಿ ಹೇಳಿದರು. ಕೊಡಗನ್ನು ಯಾವ ಪ್ರಾಂತ್ಯಕ್ಕೂ ಸೇರಿಸದೆ ಕೊಡಗಿಗೆ ಸಂಪೂರ್ಣ ಪ್ರಜಾ ಜವಾಬ್ದಾರಿ ಸರ್ಕಾರ ಪಡೆದು ಪ್ರತ್ಯೇಕ ಇಟ್ಟುಕೊಳ್ಳಬೇಕೆಂದು ಎಲ್ಲಾ ಗ್ರಾಮಗಳ ವಿಂಟಿಂಗಿನ ಅಭಿಪ್ರಾಯವಾಗಿತ್ತು.

ಮೆ. ಚೌಡ್ಲು ಕಾಳಪ್ಪನವರು, ತನಗೆ ವಿಂಟಿಂಗಿಗೆ ಬರಲು ಅನಾನುಕೂಲವೆಂದೂ, ಕೊಡಗು ಪ್ರತ್ಯೇಕವಾಗಿನ್ನು ದೊಡ್ಡ ಪ್ರಾಂತ್ಯಗಳಿಗೆ ಸಿಕ್ಕುವ ಹೆಚ್ಚಿನ ಸುಧಾರಣೆ ಪಡೆದು ಇಂಡಿಯಾ ಸರ್ಕಾರದಿಂದ ಹಿಂದಿನ ಸಿಲ್ಕನ್ನು ಕೇಳಬೇಕಾಗಿರುವೂ, ಇದಕ್ಕೆ ಇಂಡಿಯಾ ಸರ್ಕಾರವು ಒಪ್ಪದಿದ್ದರೆ ನಮ್ಮನ್ನು ಮದರಾಸಿಗೆ ಸೇರಿಸುವ ಬದಲು ಮೈಸೂರಿಗೆ ಸೇರಿಸಲು ಇಷ್ಟಪಡುತ್ತೇನೆಂದೂ, ಇನ್ನು ತನಗಳ ತಿರಸನೆಗೆ ಬಿಟ್ಟಿರುತ್ತೇನೆಂದೂ ಬರೆದ ಪತ್ರ ಓದಲಾಯಿತು.

1. ಸಂಪೂರ್ಣ ಪ್ರಜಾ ಜವಾಬ್ದಾರಿ ಸರ್ಕಾರ ಪಡೆದು ಕೊಡಗು ಪ್ರತ್ಯೇಕವಾಗಿರಬೇಕೆಂದು ಈ ಸಭೆಯು ಅಭಿಪ್ರಾಯಪಡುತ್ತದೆ.

2. ಕೊಡಗನ್ನು ಮೈಸೂರು ಯಾ ಇತರ ಪ್ರಾಂತ್ಯಗಳಿಗೆ ಸೇರಿಸುವುದಕ್ಕೆ ಈ ಸಭೆಯು ವಿರೋಧಿಸುತ್ತದೆ.

3. ತಾ. 6—11—32ರಲ್ಲು ಮೆ. ಡಿ. ನಾರಾಯಣ ಶೆಟ್ಟಿರವರ ಅಧ್ಯಕ್ಷತೆಯಲ್ಲು ನಡೆದ ವಿಂಟಿಂಗಿನ ತೀರ್ಮಾನವನ್ನು ಈ ಸಭೆಯು ವಿರೋಧಿಸುತ್ತದೆ.

ಎಂಬ ತಾವುಗಳನ್ನು ಮೆ. ಹರಗದ ಮುತ್ತಣ್ಣನವರು ಸಭೆಯ ಮುಂದಿಟ್ಟರು. ಇವುಗಳನ್ನು ಮೆ. ಕೊಕ್ಕಂಡ ಪೊನ್ನಪ್ಪನವರು ಮತ್ತು ಇನ್ನಂಗಳ್ಳಿ ದೊಡ್ಡಯ್ಯನವರು ಅನುಮೋದಿಸಲಾಗಿ ಸರ್ವಸಮ್ಮತದಿಂದ ಮಂಜೂರಾಯಿತು.

ಮೆ ಬೈರಪ್ಪನವರು, ಕೊಡಗಿನ ಭವಿಷ್ಯತ್ತನ್ನು ಕುರಿತು ಆಲೋಚಿಸಲು ಮಡಿಕೇರಿ ಯೂ ವೀರಾಜಪೇಟೆಯಲ್ಲು ನಡೆಯಲಿಕ್ಕಿರುವ ಪರಿಷತ್ತಿಗೆ 10 ಜನ ಪ್ರತಿನಿಧಿಗಳನ್ನು ಆರಿಸುವಿಕಾಗಿ ಸೂಚಿಸಿದ ಮೇರೆ (1) ಮೆ. ಹರಗದ ಮುತ್ತಣ್ಣನವರು

(2) ಚೌಡ್ಲು ಕಾಳಪ್ಪನವರು, (3) ಕುಂದಲ್ಕಿ ಚಂಗಪ್ಪನವರು (4) ಹರಗದ ಅಪ್ಪಯ್ಯನವರು, (5) ಯಡೂರು ಅಸೇಗೋಡಿ ಬೈರಪ್ಪನವರು, (6) ಬೇಳೂರು ಜೆನ್ನಬಸಪ್ಪನವರು, (7) ನೇಗಳೆ ಮಂಜಪ್ಪನವರು, (8) ದೊಡ್ಡತೋಳೂರು ಪಟೇಲ್ ಅಪ್ಪಯ್ಯನವರು, (9) ಕೂತಿ ಹೊಸಮನೆ ತಮ್ಮಣ್ಣನವರು ಮತ್ತು (10) ಕೊಕ್ಕನಳ್ಳಿ ದೊಣ್ಣಂಡ ಪೊನ್ನಪ್ಪನವರು, ಈ ಹತ್ತು ಮೆಂಬರರನ್ನು ಸರ್ವಸಮ್ಮತದಿಂದ ಆರಿಸಲಾಯಿತು.

ಕೊಡಗಿನ ಸರ್ವ ಪಕ್ಷೀಯ ಪರಿಷತ್ತನ್ನು ಮಡಿಕೇರಿಯಲ್ಲಿ ನಡಿಸಬೇಕಾಗಿ ದೇಶದ ಮುಂದಾಳುಗಳನ್ನು ಈ ಸಭೆಯು ಕೇಳಿಕೊಳ್ಳುತ್ತದೆಯೂಗಿ ಪ. ಅಪ್ಪಯ್ಯನವರು ಸೂಚಿಸಿ, ಪ. ಸುಬ್ಬಯ್ಯನವರು ಅನುಮೋದಿಸಿ ಸರ್ವಸಮ್ಮತದಿಂದ ಒಪ್ಪಲಾಯಿತು.

ಕೊಡಗಿನ ಭವಿಷ್ಯತ್ತಿನ ವಿಷಯ ನಡೆಯುವ ಪರಿಷತ್ತಿಗೆ ಈ ಪ್ರಾಧಿನಿಧಿಂದ ಹೋಗುವ ಪ್ರತಿನಿಧಿಗಳಿಗೆ ಈ ಸಭೆಯು ಸ್ವತಂತ್ರ ಕೊಡುತ್ತದೆಯೆಂಬ ತರಾವನ್ನು ಅಧ್ಯಕ್ಷರು ಸಭೆಯ ಮುಂದಿಟ್ಟರು. ಮೆ. ಕುಂದಲ್ಕಿ ಚಂಗಪ್ಪನವರು ಮತ್ತು ಬೇಳೂರು ಜೆನ್ನ ಬಸಪ್ಪನವರು ಅನುಮೋದಿಸಲಾಗಿ, ಸರ್ವ ಸಮ್ಮತದಿಂದ ಒಪ್ಪಿಗೆ ಕೊಡಲಾಯಿತು. ಸರ್ವಪಕ್ಷದ ಪರಿಷತ್ತಿನ ತಾರೀಕನ್ನು ಒಂದು ವಾರಕ್ಕೆ ಮುಂಚೆ ಪ್ರತಿನಿಧಿಗಳಿಗೆ ತಿಳಿಸುವಂತೆ ಮೆ. ವೆಂಕಪ್ಪಯ್ಯನವರನ್ನು ಕೇಳಿಕೊಳ್ಳುವಂತೆ ತೀರ್ಮಾನಿಸಲಾಯಿತು. ಈ ದಿವಸದ ರಿಕಾರ್ಡನ್ನು ಪ್ರತಿನಿಧಿಯೂಗಿ ಆರಿಸಿರುವ ಮೆ. ಹರಗದ ಅಪ್ಪಯ್ಯನವರು ಇಟ್ಟಿರುವಂತೆ ತೀರ್ಮಾನಿಸಲಾಯಿತು.

ಮೆ. ಕುಂದಲ್ಕಿ ಚಂಗಪ್ಪನವರು ಎಷ್ಟೊಂಗು ಸರಾಗವಾಗಿ ನಡೆದುದಕ್ಕೆ ಅಧ್ಯಕ್ಷರಿಗೂ, ಸಭಿಕರಿಗೂ ವಂದಿಸಿದನಂತರ ಎಷ್ಟೊಂಗು ಬರಕಾಸ್ತು ಮಾಡಲಾಯಿತು.

ಹೆಚ್. ಸಿ. ಅಪ್ಪಯ್ಯ,
(ಅಧ್ಯಕ್ಷ)

ಅಖಿಲ ಭಾರತ ಸಹಕಾರ ದಿನಾಚರಣೆ.
ನೂರ್ನಾಡು.

ತಾರೀಕು 5—11—1932 ರಲ್ಲು ನೂರ್ನಾಡು ಕೋ. ಯೂನಿಯನ್ ಆಫೀಸಿನಲ್ಲು ಮೇಲಿನ ದಿನವನ್ನು ವ್ಯವಸಾಯಿಕ ಶಾಸ್ತ್ರಜ್ಞರಾದ ಮೆ. ಕೆ. ಬಿ. ಪೊನ್ನಪ್ಪನವರ ಅಧ್ಯಕ್ಷತೆಯಲ್ಲಿ ಹಗಲು 2 ಗಂಟೆಗೆ ಆಚರಿಸಲಾಯಿತು.

ಈ ಸಮ್ಮೇಳನಕ್ಕೆ ಈ ಯೂನಿಯನ್ನಿನ ಸಂಯೋಜಿತವಾದ ಪ್ರತಿ ಸಂಘಗಳ ಮೆಂಬರುಗಳು ಸೇರಿ 200 ಜನರೂ, ಸಹಕಾರಿ ಸಂಘಗಳ ಇನ್‌ಸ್ಪೆಕ್ಟರೆಂಬ ಮೆ. ಬೊಳ್ಳಚೆಟ್ಟಿರ ಚಂಗಪ್ಪನವರು, ಸುಪರ್ ವೈಜರಾದ ಮೆ. ಮೊಣ್ಣಂಡ ಅಪ್ಪಯ್ಯನವರೂ ಹಾಜರಿದ್ದರು.

ಅಧ್ಯಕ್ಷರು ಅಧ್ಯಕ್ಷಸ್ಥಾನವನ್ನು ವಹಿಸಿಕೊಂಡ ನಂತರ ಸಭೆಯ ಮುಂದೆ ಮೆ. ಬಲ್ಲಚಂಡ ಕಾಳೆಂಗನವರು ಸ್ವಾರಸ್ಯವಾಗಿ ದೇವರ ಪ್ರಾರ್ಥನೆಯನ್ನು ಮಾಡಿದರು.

ಅನಂತರ ಅಧ್ಯಕ್ಷರು ಈ ಕಾಟಿಪ ಕುದ್ದಿಶ್ಯವನ್ನೂ ಸಹಕಾರದ ಚರಿತ್ರೆಯನ್ನೂ ಸಂಕ್ಷೇಪವಾಗಿ ವಿವರಿಸಿದ ಮೇಲೆ ಕಾರ್ಯಕ್ರಮ ಪಟ್ಟಿಯಲ್ಲಿ ನಿರ್ದೇಶಿಸಿದ ಮೇರೆ ಸಹಕಾರದ ಉದ್ದಿಶ್ಯವನ್ನೂ, ಧರ್ಮವನ್ನೂ ಮೆಂಬರುಗಳಿಗೆ ಬೋಧಿಸಲು ಮೆ. ಪುಡಿಯಂಡ ದೇವಯ್ಯನವರನ್ನು ಕೇಳಿಕೊಳ್ಳಲು ದೇವಯ್ಯನವರು ಸಭಿಕರಿಗೆ ವಂದಿಸಿ:—ಬಡ ರೈತರ ಅಥವಾ ಬಡ ಜನರ ಸಾಂಪತ್ತಿಕ ಮತ್ತು ಸಾಮಾಜಿಕ ಸ್ಥಿತಿಗಳನ್ನು ಅಭಿವೃದ್ಧಿಗೊಳಿಸಿ, ಅವರ ಕಷ್ಟಗಳನ್ನು ನೀಗಿ ಸುಖದ ದಾರಿಯನ್ನು ತೋರಿಸಿಕೊಡುವಂಥಾದ್ದೇ ಸಹಕಾರವೆಂದೂ, ಇಂಥಾ ಸಹಕಾರದ ಅಭಿವೃದ್ಧಿಯೊ ಕ್ಷೀಣಗತಿಯು ಪ್ರತಿ ಒಬ್ಬ ವೈಂಬರನನ್ನು ಅವಲಂಬಿಸಿರುತ್ತೆಂದೂ, ಆದುದರಿಂದ ಪ್ರತಿ ಒಬ್ಬರೂ ಅವರವರ ಸಂಘದ ಮೇಲೆ ವಿಶ್ವಾಸ, ಪ್ರೀತಿ ಮತ್ತು ಭಕ್ತಿಗಳನ್ನು ಇಟ್ಟುಕೊಂಡು ಎಲ್ಲರ ಸುಖಕ್ಕೋಸ್ಕರ ಎಲ್ಲರೂ ಪ್ರಯತ್ನಪಡುವದೇ ಸಹಕಾರ ಧರ್ಮವೆಂದು ಹೇಳಿದರು. ಅಲ್ಲದೆ ಇಂಥಾ ಪ್ರತಿ ಒಂದು ಸಂಘದ ಏಳಿಗೆಯು ಆಯೂಯ ಸಂಘದ ಪೈಸಿಡೆಂಟರು ಮತ್ತು ಸೆಕ್ರೆಟರಿಗಳ ಕೆಲಸದ ಮೇಲೆ, ಇರುತ್ತದೆಂದೂ ಹೇಳಿ ಅವರ ಭಾಷಣವನ್ನು ಮುಗಿಸಿದರು.

ಅಧ್ಯಕ್ಷರ ಕೋರಿಕೆ ಮೇರೆ ಮೆ. ಸಿ ಯಂ. ಉಲ್ಲಾಸನವರು ಮಿತವ್ಯಯವನ್ನು ಕುರಿತು ಮಾತಾಡುತ್ತಾ, 'ಒಬ್ಬ ಮನುಷ್ಯನು ಸುಖದಿಂದ ಬಾಳಬೇಕಾದರೆ, ಅವನ ಆರ್ಥಿಕ ಸ್ಥಿತಿಯು ಅಭಿವೃದ್ಧಿಯಾಗಬೇಕಾವಶ್ಯ ಅವನು ಮಿತವ್ಯಯವನ್ನು ಕಲಿತು, ಆಚರಣೆಗೆ ತರಬೇಕೆಂದು' ಮುಂತಾಗಿ ಹೇಳಿ, ಮಿತವ್ಯಯದ ಶತ್ರುವಾದ ದುಂದುಗಾರಿಕೆಯ ಕೆಟ್ಟ ಪರಿಣಾಮಗಳನ್ನು ಜೆನ್ನಾಗಿ ವಿವರಿಸಿದರು.

'ಮೆ. ಚೌರಿರ ಅಪ್ಪಯ್ಯನವರು ಸ್ವಾವಲಂಬನದ ವಿಷಯ ಭಾಷಣ ಮಾಡುವಾಗ್ಯೆ, ಪರರ ಆಶ್ರಯವನ್ನು ಆದಷ್ಟು ಕಡಿಮೆ ಮಾಡಿ, ತನ್ನ ಸಂಪಾಧನೆಯಿಂದ ತಾನು ಜೀವನ ನಡಿಸುವುದು ಶ್ರೇಷ್ಠವಾದುದೆಂದೂ, ತನ್ನ ಕಾಲಿನ ಮೇಲೆ ತಾನು ನಿಲ್ಲುವ ಈ ಗುಣವೇ ಸ್ವಾವಲಂಬನವೆಂದೂ, ಸಹಕಾರ ತತ್ವಗಳಲ್ಲಿ ಒಂದಾದ ಇದನ್ನು ಎಲ್ಲಾ ಸಹಕಾರಿಗಳು ಜಾರಿಗೆ ತರಬೇಕೆಂದೂ, ರೈತನಿಗೆ ವ್ಯವಸಾಯಕ್ಕೆ ಬೇಕಾಗುವ ಎಲ್ಲಾ ಸಾಮಾನುಗಳನ್ನೂ, ಸಂಸಾರದ ಖರ್ಚಿಗೆ ಅವಶ್ಯವಿರುವ ಎಲ್ಲಾ ಸಾಮಗ್ರಿಗಳನ್ನೂ ತಾನಾಗಿಯೇ ಮಾಡಿಕೊಳ್ಳಲು ಗ್ರಾಮಸ್ಥರೆಲ್ಲರೂ ಪ್ರಯತ್ನಿಸಬೇಕೆಂದು ಮುಂತಾಗಿ ಹೇಳಿದರು.

ಈ ಯೂನಿಯನ್ನಿನ ಪೈಸಿಡೆಂಟರಾದ ಮೆ. ಬಡುವಂಡ ಗಣಪತ್ತಿಯವರು ಸಹಕಾರಿಗಳ ಕರ್ತವ್ಯವನ್ನು ಕುರಿತು ಮಾತಾಡುತ್ತಾ, ಸಂಘದ ಮೆಂಬರುಗಳು ಸಾಲದ ಮೊಬಲಗನ್ನು ಕಂತುವಾರು ತಪ್ಪದೆ ಮರುಪಾವತಿ ಮಾಡಬೇಕೆಂದೂ, ಈ ವಿಷಯ ಕಮಿಟಿಯವರು ನಿರ್ದಾಕ್ಷಿಣ್ಯದಿಂದ ವರ್ತಿಸಬೇಕೆಂದೂ, ಈ ಉತ್ತಮವಾದ ತತ್ವವನ್ನು ಎಲ್ಲರೂ ಜಾರಿಗೆ ತಾರದೆ ಹೋದರೆ ಹಲವರು ಸಾಹುಕಾರರ ಒಲೆಗೆ ಪುನಹ ಬೀಳಬೇಕಾಗುವದೆಂದೂ ಮುಂತಾಗಿ ಹೇಳಿದರು.

ಈ ಸರ್ಕಲಿನ ಸುಪರ್‌ವೈಜರಾದ ಮೆ. ಮೊಣ್ಣಂಡ ಅಪ್ಪಯ್ಯನವರು ಸಹಕಾರದ ತತ್ವಗಳನ್ನು ಇನ್ನೂ ವಿಸ್ತಾರವಾಗಿ ವಿವರಿಸಿ, ಗ್ರಾಮಸ್ಥರಲ್ಲಿರುವ ಪರಸ್ಪರ ಮತ್ಸರವು ಸಂಘಗಳ ಅಭಿವೃದ್ಧಿಗೆ ದೊಡ್ಡ ಅಡಚಣೆಯೆಂತಲೂ, ಇದನ್ನು ಬಿಟ್ಟು 'ತಾನು ಪರರಿಗೆ, ಪರರು ತನಗೆ' ಎಂಬ ತತ್ವದಂತೆ ಪರೋಪಕಾರವನ್ನು ಮಾಡುತ್ತಾ ಬಂದರೆ ಈ ಜನ್ಮವು ಸಾರ್ಥಕವಾಗುವದೆಂತಲೂ, ಒಗ್ಗಟ್ಟಿನಲ್ಲಿ ವರ್ತಿಸಿದರೆ ಸಹಕಾರ ಚಳವಳಿಕ್ಕೆ ದೊಡ್ಡ ಕೀರ್ತಿ ದೊರೆಯುವದೆಂತಲೂ ಮುಂತಾಗಿ ಸ್ವಾರಸ್ಯವಾಗಿ ಭಾಷಣ ಮಾಡಿದರು.

ಸಹಕಾರಿ ಸಂಘಗಳ ಇನ್‌ಸ್ಪೆಕ್ಟರಾದ ಮೆ. ಬೊಳ್ಳಚೆಟ್ಟಿರ ಚಂಗಪ್ಪನವರು ಸಹಕಾರಿ ಸ್ಟೋರುಗಳ ಪ್ರಯೋಜನವನ್ನು ಬೇರೆ ದೇಶಗಳಲ್ಲಿರುವುಗಳ ಉದಾಹರಣೆಯಿಂದ ವಿವರಿಸಿ, ಜಂಟಿ ವ್ಯಕ್ತಿಯ ಸ್ಟೋರುಗಳಿಂದ ರೈತರ ಭಕ್ತಕ್ಕೆ ಒಳ್ಳೇ ಬೆಲೆ ದೊರೆಯುವದೆಂದೂ, ಕೊಂಡುಕೊಳ್ಳುವ ಸ್ಟೋರ್‌ಗಳಿಂದ ಸರಿಯಾದ ಅಳತೆಯಿಂದ ನಷ್ಟವಿಲ್ಲದೆ ಒಳ್ಳೇ ಸಾಮಾನುಗಳು ದೊರೆಯುವೆಂದೂ ಮುಂತಾಗಿ ಸೂಚಿಸಿದರು.

ಅನಂತರ ಕೆಳಗಿನ ತರಾವುಗಳು ಸರ್ವಸಮ್ಮತದಿಂದ ಪಾಸಾದವು.

1 ಪ್ರತಿ ಒಬ್ಬ ರೈತನು ಅವನವನ ಹಿಡ್ಲಲ್ಲಿ ಕಮ್ಮಿ ಪಕ್ಷ ಒಂದು ಎಕರೆ ಬಾಳೆ, ಅರಸಿನ ಮತ್ತು ತುಂತಿ, ಇವುಗಳ ತೋಟವನ್ನು ಮಾಡಬೇಕೆಂದೂ, ಕಮ್ಮಿ ಪಕ್ಷ ವರ್ಷಕ್ಕೊಂದು ಎಕರೆ ಲಂಕಾನ ಕಡಿಯುತ್ತಾ ಬರಬೇಕೆಂದೂ, ಈ ವಿಷಯ ಎಚ್ಚರ ತೆಗೆದುಕೊಳ್ಳಲು ಪ್ರತಿ ಸಂಘಗಳಲ್ಲೂ ಒಂದೊಂದು ಕಮಿಟಿಯನ್ನು ನೇಮಕಮಾಡಬೇಕೆಂದೂ ಮೆ. ಚೌರಿರ ಅಪ್ಪಯ್ಯನವರು ಸೂಚಿಸಿದ ತರಾವಿಗೆ ಮೆ. ಮಡಿಯಂಡ ದೇವಯ್ಯನವರು ಅನುಮೋದಿಸಲು ಸರ್ವಸಮ್ಮತದಿಂದ ಮಂಜೂರುಮಾಡಲಾಯಿತು.

2. ವ್ಯವಸಾಯದ ಅಭಿವೃದ್ಧಿಗೆ, ಈಗ ಅಧ್ಯಕ್ಷರಾಗಿರುವ ಎಗ್ರಿಕಲ್ಚರ್ ಡೆಮೊನ್‌ಸ್ಟ್ರೇಟರು ಗ್ರಾಮಕ್ಕೆ ಬಂದು ಭಾಷಣ ಕೊಟ್ಟು ಒಳ್ಳೆ ನಮೂನೆಯ ವ್ಯವಸಾಯದ ವಿಷಯವನ್ನು ತಿಳಿಸಬೇಕೆಂದು ರೈತರು ಬರಕೊಳ್ಳುವಾಗ ಬಂದು ಸಹಾಯಮಾಡಬೇಕೆಂದು ಮೆ. ಪಳಂಗಂಡ ಚಂಗಪ್ಪನವರು ತಂದ ತರಾವಿಗೆ ಮೆ. ಬಡುವಂಡ ಗಣಪತ್ತಿಯವರು ಅನುಮೋದಿಸಲು ಸರ್ವಸಮ್ಮತದಿಂದ ಪಾಸುಮಾಡಲಾಯಿತು.

ಅನಂತರ ಅಧ್ಯಕ್ಷರು ವ್ಯವಸಾಯದ ವಿಷಯದಲ್ಲಿಯೂ, ಸಹಕಾರದ ವಿಷಯದಲ್ಲಿಯೂ ಬಹು ಸ್ವಾರಸ್ಯವಾಗಿ ಭೋದಿಸಿದರು. ರೈತರಾದವರಿಗೆ ದನವೇ ಶ್ರೇಷ್ಠವಾದ ವಸ್ತುವೆಂದೂ, ಗ್ರಾಮಾಭಿವೃದ್ಧಿಗೆ ದನವೇ ಕಾರಣವೆಂದೂ, ಆದುದರಿಂದ ಅವುಗಳನ್ನು ಸರಿಯಾಗಿ ಸಾಕಲು ಪ್ರತಿ ಒಬ್ಬ ರೈತನೂ ಪ್ರಯತ್ನಪಡುವುದು ಒಂದನೇ ಕೆಲಸವೆಂದೂ ವಿವರಿಸಿದರು. ಉತ್ತಮವಾದ ಬೆಳೆಯನ್ನು ತೆಗೆಯುವ ವಿಷಯವನ್ನು ವಿವರಿಸಿ, ಗೊಬ್ಬರವನ್ನು ಸಂಪಾದಿಸುವುದು ಮತ್ತು ಇದನ್ನು ಉಪಯೋಗಿಸುವದು ಇವುಗಳ ಕ್ರಮವನ್ನು ಭೋದಿಸಿದರು. ಇವುಗಳಲ್ಲದೆ ಸಹಕಾರ ತತ್ವಗಳಾದ ಮಿತವ್ಯಯ, ಸ್ವಾವಲಂಬನ ಮತ್ತು ಪರಸ್ಪರ ಸಹಾಯ ಇವುಗಳನ್ನೂ ಸಹ ಸೂಕ್ಷ್ಮವಾಗಿ ವಿವರಿಸಿ, ಸಹಕಾರವೇ ದೇಶದ ಏಳಿಗೆಯ ತಳಹದಿ ಎಂದು ಭಾಷಣವನ್ನು ಮುಗಿಸಿದರು.

ಈ ಕೂಟವನ್ನು ಸಾಂಗವಾಗಿ ನಡಿಸಿಕೊಟ್ಟದ್ದಕ್ಕಾಗಿ ಅಧ್ಯಕ್ಷರಿಗೆ ಸಭೆಯವರ ಪರವಾಗಿ ಮೆ. ಚೌರಿರ ಅಪ್ಪಯ್ಯನವರು ವಂದನಾದಿಗಳನ್ನರ್ಪಿಸಿದರು.

ಮೆ. ಬಲ್ಲಚಂಡ ಕಾಳೆಂಗನವರು ಸ್ವಾರಸ್ಯವಾಗಿ ಮಂಗಳ ಪದವನ್ನು ಹಾಡಿದರು.

ಅನಂತರ ಕೂಡಿದ ಮೆಂಬರುಗಳೆಗೆಲ್ಲಾ ತಂಡಿ ತೀರ್ಥಗಳ ಬಟವಾಡೆ ಆದನಂತರ 5.45 ಗಂಟೆಗೆ ಎಷ್ಟೊಂಗನ್ನು ಬರಕಾಸ್ತು ಮಾಡಲಾಯಿತು.

ಕೆ. ಬಿ. ಪೊನ್ನಪ್ಪ,
(ಅಧ್ಯಕ್ಷರು)

ನೋಟೀಸು.

ಸಂಘದ ಕಮಿಟಿ ಎಷ್ಟೊಂಗೊಂದು ವೀರಾಜಪೇಟೆ ಖದ್ದರ್ ಸ್ಟೋರಿನಲ್ಲಿ ತಾ. 3—12—32ನೇ ಶನಿವಾರ ಮಧ್ಯಾಹ್ನ 11 ಗಂಟೆಗೆ ನಡೆಯುತ್ತದೆ. ಮಹತ್ವದ ವಿಷಯುಗಳು ಜರ್ಜಿಗೆ ಇರುವದರಿಂದ ಪ್ರತಿಯೊಬ್ಬ ಮೆಂಬರನು ಖುದಿತವಾಗಿ ಹಾಜರಾಗಬೇಕಾಗಿ ಕೋರಲಾಗಿದೆ.

1. "ಕೊಡಗಿನ ಸರಕಾರಕ್ಕೆ ಇಂಡಿಯೂ ಸರಕಾರವು ಹಿಂದಿನ ಸಿಲ್ಕಿನ ಕೆಲವು ಭಾಗವನ್ನಾದರೂಕೊಟ್ಟು ಇನ್ನು ಮುಂದೆ ಕಾಲಿಯೂನ ಏನು ಲಕ್ಷ ರೂಪಾಯಿ (ಸಬ್ಸಿನ್ಯನ್) ಕೊಡಲು ಒಪ್ಪಿ ಕೊಡಗಿಗೆ ಸಂಪೂರ್ಣ ಪ್ರಜಾಜವಾಬ್ದಾರಿ ಸರಕಾರವನ್ನು ಮಂಜೂರು ಮಾಡಿಕೊಡಬೇಕು ಹೀಗೆ ಮಾಡಲು ಸಾಧ್ಯವಿಲ್ಲವೆಂತ ಸಂಬಂಧಪಟ್ಟ ಅಧಿಕಾರಿಗಳಿಗೆ ತೋರಿದರೆ ಕೊಡಗಿನ ಜನರಿಗೆ ಇರುವ ಕೋವಿ, ಕತ್ತಿ, ಜಮ್ಮು ಮತ್ತು ಇತರ ಹಕ್ಕುಗಳನ್ನು ಭದ್ರಪಡಿಸಿಕೊಂಡು ಪ್ರತ್ಯೇಕ ಜಿಲ್ಲೆಯೂಗಿಯೇ ಇಟ್ಟುಕೊಳ್ಳುವಶಕ್ತಿನಿಂದ ಮೈಸೂರು ಸಂಸ್ಥಾನಕ್ಕೆ ಸೇರಿಸಬೇಕು" ಎಂಬ ತರಾವನ್ನು ಚರ್ಚಿಸಿ ತೀರ್ಮಾನಿಸುವುದು.

2. ಜನರಲ್ ಸೆಕ್ರೆಟರಿ ಮೆ. ಕೆ. ಪಿ ಚಿಣ್ಣಪ್ಪನವರ ರಾಜೀನಾಮೆ, ಬದಲಿಗೆ ಇನ್ನೊಬ್ಬರ ಆಯ್ಕೆ.

3. ಜುದಾ ವಸೂಲಿನ ವಿಚಾರ.

4. ಸಂಘದ ಜನವರಿ ತಾರೀಖಿನ ಲೆಕ್ಕ.

ಕೊಡಗು ಜಿಲ್ಲಾ ಸಹಕಾರ ಸಂಘಗಳ ಮಂಡಲಿ, ತಾ: 13—11—32. } ಸಿ. ಎನ್. ವೆಂಕಪ್ಪಯ್ಯ, (ಕಾರ್ಯದರ್ಶಿ.)

ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನ.
ಏಳನೆಯ ಅಧಿವೇಶನ.
ಪ್ರಕಟಣೆ ೪.

ಬರುವ ಡಿಸೆಂಬರ್ ತಿಂಗಳ ಕಡೆಯ ವಾರದಲ್ಲಿ ಮಡಿಕೇರಿಯಲ್ಲಿ ಜರಗಲಿರುವ ಕರ್ನಾಟಕ ಸಾಹಿತ್ಯ ಪರಿಷತ್ತಿನ ಅಧಿವೇಶನದ ಮುಂದೆ ಸಾಹಿತ್ಯ ಸಂಬಂಧವಾಗಿ ಪ್ರಬಂಧಗಳನ್ನು ಹಿಡಲು ತತ್ಸಂಬಂಧವಾದ ಕರಾವುಗಳನ್ನು ತರಲು ಇಷ್ಟವಿರುವ ಸಾಹಿತ್ಯಾಭಿಮಾನಿಗಳು ತಂತಮ್ಮ ಪ್ರಬಂಧಗಳನ್ನೂ ಕರಾವುಗಳನ್ನೂ ಡಿಸೆಂಬರ್ ತಾರೀಖು ಒಳಗೊಳಗೆ ಶ್ರೀ ಹಿಡ್ಲಮನೆ ಆತ್ಮಾರಾಮ ಶಾಸ್ತ್ರಿ, ಸಾಹಿತ್ಯ ಕಮಿಟಿಯ ಕಾರ್ಯದರ್ಶಿ, ಹೈ ಸ್ಕೂಲು, ಮಡಿಕೇರಿ—ಈ ವಿಳಾಸಕ್ಕೆ ಕಳುಹಿಸಿ ಕೊಡಬೇಕಾಗಿ ಈ ಮೂಲಕ ವಿಜ್ಞಾಪಿಸಿಕೊಳ್ಳಲಾಗಿದೆ. ಪ್ರಬಂಧಗಳನ್ನು ಅಧಿವೇಶನದ ಮುಂದೆ ಓದಲು ಬಿಡುವ ಹಕ್ಕೂ ಅವುಗಳನ್ನು ಲೇಖನ ಕರ್ತೃಗಳಿಗೆ ಮರಳಿಸುವ ಹಕ್ಕೂ ವಿಷಯ ನಿರ್ಣಯ ಮಂಡಲದ ಕೈಯಲ್ಲಿರುತ್ತದೆ.

ಮೇಲೆ ನಮೂದಿಸಿದ ತಾರೀಖಿನೊಳಗೆ ತಪ್ಪದೆ ಪ್ರಬಂಧಗಳನ್ನಾಗಲೀ ತರಾವುಗಳನ್ನಾಗಲೀ ರವಾನಿಸಿಕೊಡಬೇಕಾಗಿ ವಿನಂತಿ.

ಮಡಿಕೇರಿ, ಕ. ಸಾ. ಪ. ಸ್ಥಾ. ಮಂಡಲ, ಶಕ ೧೮೫೪, ಕಾರ್ತಿಕ ಬಹುಳ ಸಪ್ತಮಿ. } ಜಂಟಿಕಾರ್ಯದರ್ಶಿಗಳು.

ಯು೨. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಸಿಶಿಯನ್ಸ್, ರಥಬೀದಿ, ಮಂಗಳೂರು, ಇವರ

ಅನುಭವಸಿದ್ಧ ಔಷಧಗಳು.

೧. ಧಾತುಪುಷ್ಟಿ ಲೇಹ—ಬಾಲ್ಯತನದ ದುರಭ್ಯಾಸಗಳ ಪರಿಣಾಮದಿಂದ ಧಾತುನಷ್ಟವಾಗುವಿಕೆ, ಧಾತುವು ಮೂತ್ರದೊಡನೆಹೊರ ಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ಮೇಹ, ಪಿತ್ತದ ಬಾಧೆ, ರಕ್ತಪಿತ್ತ, ಒಳಜ್ವರ, ಮಲಬದ್ಧತೆ, ಕೈಕಾಲು ಬಹ್ವುವುದು ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದುಹೋದ ಶಕ್ತಿಯು ಪುನಃ ತುಂಬಿಕೊಳ್ಳುವುದು. ಡಬ್ಬಿ 1ಕ್ಕೆ ರೂ. 2—8—0. 3ಕ್ಕೆ ರೂ. 7—0—0.

೨. ಅಶೋಕಾರಿಷ್ಟ ಮತ್ತು ಮೂತ್ರೆ—ಹೆಂಗಸರ ಮುಟ್ಟುದೋಷಗಳು, ಋತುಸ್ರಾವವು ಹೆಚ್ಚು ಕಮ್ಮಿಯಾಗುವುದು, ಹೊಟ್ಟೆನೋವು, ಸೊಂಟನೋವು, ಸಂತಾನಹೀನತೆ, ಮೂರ್ಛೆ, ಮಲಬದ್ಧತೆ, ರಕ್ತಹೀನತೆ, ಕೈ ಕಾಲು ಸೆಳೆತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನು ಗುಣಪಡಿಸುವದು. 1 ಬಾಟ್ಲಿ ಔಷಧಕ್ಕೂ, 1 ಡಬ್ಬಿ ಮೂತ್ರೆಗೂ ರೂ. 2—4—0; 2ಕ್ಕೆ ರೂ. 4—4—0.

೩. ಮೇಹಕುಠಾರ—ಇದು ಮೂತ್ರಸ್ಥಾನದಿಂದ ಕೆಂಪು, ಬಿಳಿದು, ಹಳದಿಯಂತೆ ಹೋಗತಕ್ಕ ಕೀವನ್ನೂ, ವ್ರಣವನ್ನೂ, ಉರಿಯನ್ನೂ ಗುಣಪಡಿಸುತ್ತದೆ. ಡಬ್ಬಿ 1ಕ್ಕೆ ರೂ. 2—8—0; 3ಕ್ಕೆ ರೂ. 7—0—0.

೪. ಬಾಲಾಗ್ರಹ ಗುಟಿಕೆ—ಬಾಲಗ್ರಹ, ಕಫ, ಕೆಮ್ಮು, ಉಬ್ಬಸ, ಎದೆಯಲ್ಲಿ ಗುರು ಗುರು ಶಬ್ದ, ಮಲಬದ್ಧತೆ ಇವುಗಳ ಮೇಲೆ ದಿವ್ಯ ಔಷಧ. ಬಾಟ್ಲಿ ಒಂದಕ್ಕೆ

ಕೊಡಗಿನಲ್ಲಿ ಸತ್ಯಾಗ್ರಹ.

ಹುದಿಕೇರಿಯಲ್ಲಿ ಸ್ವಯಂ ಸೇವಕರ ಕೈದು.

ಜುಲುಮೆನೆಗಾಗಿ ಎತ್ತುಗಳ ಜಪ್ತು.

ಈ ತಾ. 21ನೇ ಸೋಮವಾರ ಹುದಿಕೇರಿ ಸಂತೆಯಲ್ಲಿ 'ಸೈಕ್ಲೊಸ್ಟೈಲ್' ಮಾಡಿದ 'ವೀರ ಭಾರತಿ' ಎಂಬ ಕೊಡಗಿನ ಸತ್ಯಾಗ್ರಹ ಹಸ್ತ ಪತ್ರಗಳನ್ನು ಹಂಚಿದಕ್ಕಾಗಿ ಶ್ರೀಯುತರುಗಳಾದ ಜೊಟ್ಟಿಯಂಡಮೊಡ ಐಯ್ಯಣ್ಣನವರು ಮತ್ತು ಬೇಗೂರು ಗ್ರಾಮದ ಅಗಸ ಬಣ್ಣರ ಐಯ್ಯನವರು ಪೊಲೀಸು ಸಬ್ ಇನ್‌ಸ್ಪೆಕ್ಟರವರಿಂದ ದಸ್ತಗಿರಿ ಮಾಡಲ್ಪಟ್ಟು, ಅದೇ ದಿನ ಸಾಯಂಕಾಲ ಬಸ್ಸಿನಲ್ಲಿ ವೀರಾಜಪೇಟೆ ಪೊಲೀಸು ಲಾಕಪ್ಪಿಗೆ ಒಯ್ಯಲ್ಪಟ್ಟರು.

ಕಾಸನಭಂಗ ಚಳವಳಿಯಲ್ಲಿ ಭಾಗಿಯಾಗಿ ಈಗ ಜೈಲುವಾಸದಲ್ಲಿರುವ ಶ್ರೀಯುತ ಆಲ್ಲಮಾಡ ಚಿಟ್ಟಪ್ಪನವರ 20 ರೂ. ಜುಲುಮೆನೆ ವಸೂಲಾತಿಗಾಗಿ ಪೊಲೀಸಿನವರು ಈ ತಾ. 10ರಲ್ಲಿ ಚಿಟ್ಟಪ್ಪನವರ ತಂದೆ ಏಯ್ಯಪ್ಪನವರ 2 ಎತ್ತುಗಳನ್ನು ಜಪ್ತಿಮಾಡಿ, 15 ದಿವಸಗಳ ವರೆಗೆ ಪಟೇಲರ ಜಾಮೀನು ಮೇಲು ಬಿಟ್ಟಿರುವರೆಂತಲೂ, ಮೆ. ಏಯ್ಯಪ್ಪನವರು ಅಳಿಯರು ಮೆ. ಪೋಸೆಫ್‌ರವರ ಮೂಲಕ ಮುನ್ಸೀಫ್ ಕೋರ್ಟಿಗೆ ತಕರಾರು ಅರ್ಜಿ ಹಾಕಿರುವರೆಂತಲೂ ವರ್ತಮಾನ.

ಬೊಂಬಾಯಿಯಲ್ಲಿ 2 ತಿಂಗಳ ಜೈಲುವಾಸಕ್ಕೆ ಗುರಿಮಾಡಲ್ಪಟ್ಟಿದ್ದ ಸತ್ಯಾಗ್ರಹೀ ಶ್ರೀಯುತ ಅಜ್ಜಿಕುಟ್ಟಿರ ತಮ್ಮಯ್ಯನವರು ಅವಧಿ ತೀರಿ ಈ ತಾ. 17ರಲ್ಲಿ ಬಿಡುಗಡೆಮಾಡಲ್ಪಟ್ಟರೆಂತಲೂ, ಆದರೆ, ಬೊಂಬಾಯಿಯನ್ನು ತಾ. 18 ರ ಮಧ್ಯರಾತ್ರಿಯೊಳಗೆ ಬಿಟ್ಟು ಹೋಗಬೇಕೆಂದು ಅವರಿಗೆ ಕೂಡಲೆ ಪೊಲೀಸು ಕಮಿಷನರು ಹುಕುಂ ಕೊಟ್ಟರೆಂತಲೂ ವರ್ತಮಾನ.

ಒಳದೇಶ.

ಫ್ರೇಜರ್‌ಪೇಟೆಯಲ್ಲಿ ಪ್ಲೇಗು ಅಂಟಿದ ಮೂರು ಜನರ ಪೈಕಿ ಒಬ್ಬನು ಮೃತಪಟ್ಟಿರುವನೆಂದು ಇತ್ತೀಚೆಗೆ ತಿಳಿದು ಬರುತ್ತದೆ.

ಕರ್ನಾಟಕ ಸಾಹಿತ್ಯ ಸಮ್ಮೇಳನದ 18ನೇ ಅಧಿವೇಶನವು ಬರುವ ಡಿಸೆಂಬರು ತಾ. 28, 29 ಮತ್ತು 30ರಲ್ಲು ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನಲ್ಲಿ ನಡೆಯುವ ಏರ್ಪಾಡಾಗುತ್ತಿದೆಯೆಂದು ತಿಳಿಯುತ್ತೇವೆ.

ಕೊಯಮುತ್ತೂರು ಫಾರೆಸ್ಟ್ ಕಾಲೇಜಿನಲ್ಲಿ ರೇಂಜರ್ ಕೆಲಸಕ್ಕೆ ತರಬೇತು ಹೊಂದುತ್ತಿದ್ದ ಮೆ. ಮೇಕೇರಿರ. ಜಿ. ನಂಜುಂಡನವರು ಈ ತಾ. 24ರಲ್ಲಿ ಅಲ್ಲಿಯೇ ತಿವಾಧೀನರಾದರೆಂಬುದು ತಿಳಿಯಲು ವ್ಯಸನ ಪಡುತ್ತೇವೆ.

ಕೊಡಗಿನ ಭವಿಷ್ಯತ್ತನ್ನು ಕುರಿತು ಆಲೋಚಿಸಲು ಕೊಡಗು ಜವಿನಾರ್ಡರ ಸಂಘದ ಕಾರ್ಯಕಾರಿ ಮಂಡಳಿಯು ಎಂಬಿಂಗೊಂದು ಬರುವ ಡಿಸೆಂಬರು ತಾ. 3ರಲ್ಲಿ ವೀರಾಜಪೇಟೆ ಖಾದಿ ಭಂಡಾರದಲ್ಲಿ ನಡೆಯಲಿಕ್ಕಿದೆ.

ಈ ತಾ. 27ರಲ್ಲಿ ಕಾಕೋಟು ಪರಂಬು ಹಯರ್ ಎಲಿಮೆಂಟರಿ ಶಾಲೆಯ ವಾರ್ಷಿಕೋತ್ಸವವು ಮೆ. ಎ. ಟಿ. ಚಂಗಪ್ಪನವರ ಅಧ್ಯಕ್ಷತೆಯಲ್ಲಿಯೂ, ಜ್ಯೆಷ್ಯಂಡಾಣೆ ಪೈಮರಿ ಶಾಲೆಯ ವಿದ್ಯಾರ್ಥಿಯು ಮೆ. ಬಿ. ಎ. ಬೆಳ್ಯಪ್ಪನವರ ಅಧ್ಯಕ್ಷತೆಯಲ್ಲಿಯೂ ನಡೆಯುವುದಾಗಿ ವರ್ತಮಾನ.

ಅಖಿಲ ಕೊಡಗು ಉಪಾಧ್ಯಾಯರ ಸಂಘದ ಸಮ್ಮೇಳನವು ಬರುವ ಡಿಸೆಂಬರು ತಾ. 3, 4 ಮತ್ತು 5ರಲ್ಲಿ ನಾಪೋಕ್ಲು ಮೋಡಲ್ ಶಾಲೆಯಲ್ಲಿ ಮೆ. ಎ. ರಾವ್.ರಾವ್ ಬಿ. ಎಸ್. ರವರ ಅಧ್ಯಕ್ಷತೆಯಲ್ಲಿ ನಡೆಯುವುದು. ಇದರ ಕಾರ್ಯಕ್ರಮ ಪಟ್ಟಿಯು ಇನ್ನೊಂದು ಕಡೆ ಪ್ರಕಟವಾಗಿದೆ.

ಕೊಂದಡಿ ದೊಟ್ಟು ದೇವಸ್ಥಾನದ ಸಂಬಂಧ ಬೆಟ್ಟಿಯಕ್ಕು ನಾಡಿನವರಿಗೂ, ಮನೆಯಪಂಡ ಕುಟುಂಬಸ್ಥರಿಗೂ 5 ವರ್ಷಗಳಿಂದಲೂ ನಡೆಯುತ್ತಿರುವ ವಿವಾದವನ್ನು ರಾಜಿಯಿಂದ ತೀರ್ಮಾನಿಸಿಕೊಳ್ಳಲು ಪ್ರಯತ್ನಗಳು ನಡೆಯುತ್ತಿವೆಯೆಂತಲೂ, ಉಭಯ ಕಡೆಯವರೂ ಉದಾರ ಭಾವವನ್ನು ತೋರಿಸಿ ನಾಡಿನ ಒಗ್ಗಟ್ಟನ್ನು ಕಾಪಾಡಬೇಕೆಂತಲೂ ಒಂದು ಬಾತ್ಮಿ.

ಪೆನ್ಸ್ಟ್ ಪಾರುಪತ್ಯಗಾರರು ಮತ್ತು ನಾಪೋಕ್ಲು ಬೆಂಚು ಕೋರ್ಟಿನ ಅಧ್ಯಕ್ಷರು ಆಗಿದ್ದ ಯುವ್ವಕವಾಡಿ ಗ್ರಾಮದ ಮೆ. ಮೂದಂಡ ಮಂದಣ್ಣನವರು ತಾ. 20ನೇ ಆದಿತ್ಯವಾರ ಮಡಿಕೇರಿಯಲ್ಲಿ ತಿವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅದೇ ದಿನ ಅವರ ಶವವನ್ನು ಅವರ ನಾಡು ಮನೆಗೆ ಒಯ್ದು ಅಲ್ಲಿ ದಫನ ಮಾಡಿದರು.

ಕಳೆದ ವಾರ ವೀರಾಜಪೇಟೆಯಲ್ಲಿ ನಡೆದ 'ಪುಲಿಯಂಡ ಕಪ್ಪಿನ ಹಾಕಿ ಟೂರ್ನಮೆಂಟಿನಲ್ಲಿ 11 ಟೀಮುಗಳು ಭಾಗಿಗಳಾಗಿದ್ದವು. ತಾ. 22ರಲ್ಲಿ ನಡೆದ ಅಜೈರು ಆಟದಲ್ಲಿ ಮಡಿಕೇರಿ ಹೈಸ್ಕೂಲು ಟೀಮಿನವರು ಪೊನ್ನಂಪೇಟೆ ಟೀಮಿನವರನ್ನು ಸೋಲಿಸಿ 'ಕಪ್ಪ' ನ್ನು ಗೆದ್ದರೆಂತಲೂ, 'ಸಬ್' ಮೇಜರ್ ಪ್ಲೇಟರಾಗಿ ಮೆ. ಕೆ. ಕಾಳಪ್ಪನವರು ಗೆದ್ದವರಿಗೆ 'ಕಪ್ಪ'ನ್ನು ಕೊಟ್ಟರೆಂತಲೂ ತಿಳಿಯಬರುತ್ತದೆ.

ಪೆರಂಬಾಡಿಯ ಕನ್ಯಾ ಗುರುಕುಲದಲ್ಲಿ ವಿದ್ಯಾವ್ಯಾಸಂಗ ಮಾಡುತ್ತಿರುವ ಮೆ. ಕೆ. ಪಿ. ಚಿಣ್ಣಪ್ಪನವರ ಪುತ್ರಿ (ಗಂಗಮ್ಮ) ಕುಮಾರಿ ಪದ್ಮಾವತಿಯವರು ಕಳೆದ ತಾರೀಕು 31ರಲ್ಲಿ ಅಲ್ಲಿ ಆದ ಆರ್ಯ ಸಮಾಜದ ವಾರ್ಷಿಕ ಸಮ್ಮೇಳನದಲ್ಲಿ 'ಅಧುನಿಕ ಜಾತಿ ವಿಜಾತಿಗಳಿಂದ ದೇಶಕ್ಕೆ ತುಂಬಾ ಹಾನಿ" ಎಂಬ ವಿಷಯದಲ್ಲಿ ಹಿಂದೀ ಭಾಷೆಯಲ್ಲಿ ಪಬ್ಲಿಕ್ ಸ್ಪರ್ಧೆಗೆ ನಿಂತು ಇಪ್ಪತ್ತೊಂದು ಭಾಷಣಕಾರರಲ್ಲಿ ಮೊದಲನೇಯದಾಗಿ ಬಂದರೆಂತಲೂ, ಈ ಭಾಷಣಕ್ಕೆ ಮೆಚ್ಚಿ ಸಭಾಧ್ಯಕ್ಷರು ಬಹಳ ಕೃಯಜಾಳುವ ಅನೇಕ ಗ್ರಂಥಗಳನ್ನು ಇನಾಮು ಕೊಟ್ಟರೆಂತಲೂ, ಪಡಕ್ಷಿಣದಿಂದ ಅಂದರೆ ಕನ್ನಡ ನಾಡಿನಿಂದ ಬಂದಂಥ ಎಲ್ಲರನ್ನೂ ಸೋಲಿಸಿದ್ದಕ್ಕೆ ಅಲ್ಲಿಯವರು ಬಹಳ ಶ್ಲಾಘಿಸಿದರೆಂದೂ, ಅದೇ ದಿನ ಸಾವಿರಾರು ಮಿಮಳೆಯರು ನೆರೆದಿದ್ದ ಸಭೆಯಲ್ಲಿ ಸ್ವದೇಶಿಪ್ರಚಾರ ಸಂಬಂಧ ಉಪನ್ಯಾಸ ಕೊಟ್ಟರೆಂದೂ, ತಿಳಿಯಲು ಸಂತೋಷಪಡುತ್ತೇವೆ.

ಹಿಂದೂದೇಶ.

ತಾ, 17 ರಲ್ಲಿ ಬೊಂಬಾಯಿಯಲ್ಲಿ 3 ಕಾಂಗ್ರೆಸು ಕೆಲಸಗಾರರಿಗೆ ಆರಾರು ತಿಂಗಳು ಸಜೆ ವಿಧಿಸಲಾಯಿತು.

ತಾ. 22ರಲ್ಲಿ ಲಾಹೋರಿನಲ್ಲಿ ಪರದೇಶೀ ಬಟ್ಟೆ ಅಂಗಡಿಯನ್ನು ಪಿಕೆಟ್ ಮಾಡಿದಕ್ಕಾಗಿ ಮೂರು ಸತ್ಯಾಗ್ರಹಿಗಳಿಗೆ ನಾಲ್ಕು ತಿಂಗಳು ಸಜೆ ವಿಧಿಸಲಾಯಿತು.

ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಆಫೀಸಿನಲ್ಲಿ ಕೆಲಸ ಮಾಡುತ್ತಿದ್ದವರೆಂದು ಮೆ. ಆರ್. ಕೆ. ಟಿವಾರಿಯವರು ಈ ತಾ. 22 ರಲ್ಲಿ ಕಾಶಿಯಲ್ಲಿ ಕೈದುಮಾಡಲ್ಪಟ್ಟರು.

ಈ ತಾ. 18 ರಲ್ಲಿ ಮದ್ರಾಸಿನ ಕರೆನ್ಸಿ ಆಫೀಸಿನ ಗವರ್ನಮೆಂಟಿನ ಜಿ. ಪೆರಿಯ ಅಲ್ವಾರ್ ಪಿಳ್ಳೈಯಂಬವನು 300 ಒಂದು ನೂರು ರೂಪಾಯಿಯ ನೋಟುಗಳನ್ನು ಕಳವು ಮಾಡಿ ಕಾಣದೆ ಆಗಿರುವನು.

ಕಲ್ಕತ್ತೆಯ ಸರ್ ವಾಟ್ಸನ್ ಸಾಹೇಬರವರ ಕಡೆಗೆ ಪಿಸ್ತೂಲು ಹಾರಿಸಿದ ಸುಸೀಲ ಚಕರ್ಬರ್ತಿಗೆ ಅಜನ್ಮ ದ್ವೀಪಾಂತರ ವಾಸದ ಶಿಕ್ಷೆಯಾಯಿತು. (ಅವನ ವಯಾಯ 23) ಉಳಿದ ಮೂವರನ್ನು ಬಿಡುಗಡೆ ಮಾಡಿದರು.

ಸುಭಾಷ್ ಚಂದ್ರಬೋಸರಿಗೆ ಕ್ಷಯವು ಪ್ರಬಲಿಸಿ, ಅವರ ಆರೋಗ್ಯ ಬಹಳ ಮಟ್ಟಿಗೆ ಕೆಟ್ಟು ಹೋಗಿರುವದರಿಂದಲೂ, ಸೆನ್‌ಗುಪ್ತರವರು ಬಹು ಅನಾರೋಗ್ಯ ಸ್ಥಿತಿಯಲ್ಲಿರುವದರಿಂದಲೂ ಇವರಬ್ಬರನ್ನು ಕೂಡಲೇ ಜೈಲ್ಖಾನೆಂದ ಬಿಡುಗಡೆಮಾಡಬೇಕೆಂದು ಕಲ್ಕತ್ತಾದಲ್ಲಿ ಪಬ್ಲಿಕ್ ಮೀಟಿಂಗುಗಳು ನಡೆದು ತರಾವುಗಳು ಪಾಸುಮಾಡಲಾದವು.

ಆರ್ಡಿನೇನ್ಸಿನ ಮೇರೆ 1½ ವರ್ಷ ಕಠಿಣ ಸಜೆಗೂ, 20,000 ರೂ. ಜುಲುಮೆನೆಗೂ ಗುರಿಮಾಡಲ್ಪಟ್ಟಿದ್ದ, ಶೋಲಾಪುರದ ಸಾಹುಕಾರರಾದ ಮೆ. ಗುಲಾಜ್‌ಚಂದ್ ಹಿರಾಚಂದ್‌ರನ ಅಪ್ಪೀಲಿನ ಮೇಲೆ ಹೈಕೋರ್ಟಿನವರು ಅವರನ್ನು ಖುಲಾಸು ಮಾಡಿರುವರು.

ಬರ್ಮಾದ ಜಾನಾನೆಯಲ್ಲಿ ಬರ್ಮಾವನ್ನು ಇಂಡಿಯಾದಿಂದ ಪ್ರತ್ಯೇಕಿಸಬಾರದೆಂಬವರ ಪಕ್ಷ 42 ಮೆಂಬರುಗಳೂ, ಪ್ರತ್ಯೇಕಿಸಬೇಕೆನ್ನುವವರ ಪಕ್ಷ 29 ಮೆಂಬರುಗಳೂ, ಇವೆರಡು ಪಕ್ಷಕ್ಕೆ ಸೇರದ 9 ಮೆಂಬರುಗಳೂ ಜಯಪೀಲರಾಗಿರುವರು. ಪ್ರತ್ಯೇಕಿಸಬಾರದೆಂಬುವವರ ಪಕ್ಷಕ್ಕೆ ಬಹುಮತ ದೊರೆತಿದೆ. ಆದರೂ ಆ ಪಕ್ಷದ ಮುಂದಾಳು ಮಂತ್ರಿ ಮಂಡಳಿಯನ್ನು ಏರ್ಪಡಿಸಲು ಒಪ್ಪಿಕೊಂಡಿರುವುದಿಲ್ಲ.

ಧೂಳಿಯಾದ ಜೈಲಿನಲ್ಲಿರುವ ಮೆ. ಜಮ್ನಲಾಲ್ ಬಜಾಜ್‌ರವರ ತೂಕವು 70 ಪೌಂಡು ಕಡಿಮೆಯಾಗಿದೆ; ಇನ್ನು ಹೆಚ್ಚು ಕಡಿಮೆಯಾಗಲು ಸಾಧ್ಯವಿಲ್ಲ. ಅವರನ್ನು ಹೆಚ್ಚಾದ ಕೆಮ್ಮಲೂ, ಎದೆನೋವೂ ಬಾಧಿಸುತ್ತಿದೆ. ಕೆಲವು ನೋವೂ ದಿನೇ ದಿನೇ ಜೋರಾಗುತ್ತಿದೆ. ಅವರನ್ನು ಕೂಡಲೇ ನ್ಯಾಯವಾದ ಡಾಕ್ಟರಿಂದ ಪರೀಕ್ಷಿಸದೆ ಹೋದರೆ ಅವರ ಆರೋಗ್ಯ ಬಹು ಮಟ್ಟಿಗೆ ಕೆಟ್ಟು ಹೋಗುವದೆಂದು ಅವರನ್ನು ನೋಡಿದ ಜನಕೀಲಾಯಿ ಬಜಾಜ್‌ರವರು ಪ್ರಕಟಿಸಿರುತ್ತಾರೆ.

ಇಂಗ್ಲೆಂಡ್‌ಗಾಗಿ ಅಮೇರಿಕಕ್ಕೆ ಹೊರಟ ಮಾಲಾನ ಶೌಕತ್ ಅಲಿಯವರು ತಾ. 22 ರಲ್ಲಿ ಲಂಡನಿಗೆ ತಲುಪಿದರು. ಅವರು ತಾ. 23 ರಲ್ಲಿ ಪಬ್ಲಿಕಿನಲ್ಲಿ ಭಾಷಣ ಮಾಡಿದಾಗ್ಗೆ, ಅಲ್ಲಾಹಬಾದು ಒಪ್ಪಂದದಿಂದ ಹಿಂದೂ—ಮುಸ್ಲಿಂ—ಸಿಕ್ ಒಗ್ಗಟ್ಟು ಸಾಧಿಸಲ್ಪಟ್ಟಿದೆಯೆಂದೂ, ಈ ಒಪ್ಪಂದಕ್ಕೆ 99% ಮುಸಲ್ಮಾನರ ಸಮ್ಮತಿ ಇದೆಯೆಂದೂ, ಇದನ್ನು ವಿರೋಧಿಸುವವರು ಬಹು ಸ್ವಲ್ಪ ಮುಂದಿ ಮಾತ್ರವೆಂದೂ, ಇನ್ನು ಜವಾಹರ್‌ಲಾಲ್ ಸರ್ಕಾರಕ್ಕಾಗಿ ಹಿಂದೀಯರ ಒಗ್ಗಟ್ಟಿನ ಕೋರಿಕೆಯನ್ನು ಬ್ರಿಟಿಷರು ತಿರಸ್ಕರಿಸಲು ಸಾಧ್ಯವಿಲ್ಲವೆಂದೂ ಮುಂತಾಗಿ ಹೇಳಿದನು.

ಪಾರ್ಲಿಮೆಂಟಿನ ಮೆಂಬರಾದ ಮೆ. ಹೆಡ್. ಕೆ ಹೇಲ್ಸ್‌ರವರು ಹಿಂದೂಸ್ತಾನದ ಪ್ರವಾಸವನ್ನು ಮುಗಿಸಿಕೊಂಡು ವಾಪಸು ಇಂಗ್ಲೆಂಡಿಗೆ ಹೊರಡುವ ಮುಂಚೆ ಮಹಾತ್ಮರ ಭೇಟಿಗೆ ಸರ್ಕಾರದವರು ಬಿಡದ್ದರಿಂದ ಗಾಂಧಿಜಿಯವರಿಗೆ ಬರೆದ ಪತ್ರದಲ್ಲಿ, 'ಕಾಂಗ್ರೆಸಿನವರು ದುಂಡು ಮೇಜು ಪರಿಷತ್ತಿನಲ್ಲಿ ಭಾಗವಹಿಸದ್ದು ವ್ಯಸನಕರ. ಕಾಂಗ್ರೆಸ್ಸಿನ ಸಹಕಾರವಿಲ್ಲದ ಯಾವ ರಚನೆಯನ್ನೂ ಜಾರಿಗೆ ತರಲು ಸಾಧ್ಯವಿಲ್ಲ. ಇಂಡಿ

ಬೇರೆ ಯಾರಿಂದಲೂ ಸಾಧ್ಯವಿಲ್ಲ. ಆದುದರಿಂದ ನೀವು ವಿಶ್ವಾಸ ತ್ಯಾಗಮಾಡಿ, ರಾಜಿ ಸಂಧಾನಕ್ಕೆ ಯತ್ನಿಸಬೇಕು ಎಂದು ಮುಂತಾಗಿ ಬರೆದಿರುವರು

'ಅಸ್ಪೃಶ್ಯತಾ ನಿವಾರಣೆಯ ಕೆಲಸಕ್ಕೇನೇ ನಿಮ್ಮ ಸೆವೆಯವನ್ನೆಲ್ಲಾ ಉಪಯೋಗಿಸಲು ನಿಶ್ಚಯಿಸಿರುವಿರೋ' ಎಂದು ಒಬ್ಬ ಪತ್ರಿಕಾ ಪ್ರತಿನಿಧಿಯು ಕೇಳಿದ್ದಕ್ಕೆ, ಮಹಾತ್ಮ ಗಾಂಧಿಯವರು ಹೇಳಿರುವದೇನೆಂದರೆ—'ನನ್ನ ಈಗಿನ ಇರಾದೆಯು ಹಾಗೆಂದು ಹೇಳಲಾರೆ. ಅತ್ಯವಶ್ಯವಾದ ಅಸ್ಪೃಶ್ಯತಾ ನಿವಾರಣೆಗೂ, ಹಾಗೆಯೇ ಬೇರೆ ಹಲವು ಕೆಲಸಗಳಿಗೂ ನನ್ನ ಜೀವವನ್ನು ಧಾರೆ ಎರೆದಿರುವೆನು. ನನ್ನ ಜೀವವನ್ನು ಭಾಗಗಳಾಗಿ ವಿಂಗಡಿಸಲು ಸಾಧ್ಯವಿಲ್ಲ; ಅದು ಒಂದು ಇಡೀ ಆಗಿದೆ. ಯಾವ ಕೆಲಸವನ್ನು ನಾನು ಮಾಡುವದಾದರೂ, ಸತ್ಯ ಮತ್ತು ಅಹಿಂಸಾತತ್ವವನ್ನು ಕಾಪಾಡುವ ಉದ್ದೇಶದಿಂದಲೇ ಮಾಡುವದಾಗಿದೆ.'

ಗುರುವಯ್ಯೂರು ದೇವಸ್ಥಾನದ ಮುಖ್ಯಾಧಿಕಾರಿ ಜಾನೋನ್‌ರವರು ಅಲ್ಲಿಯ ದೇವಸ್ಥಾನವನ್ನು ಅಸ್ಪೃಶ್ಯರಿಗಾಗಿ ತೆರೆದಿಡಬೇಕೆಂದು ಮಹಾತ್ಮರು ತಂತಿ ಬಿಟ್ಟರು. ಅದಕ್ಕುತ್ತರವಾಗಿ ಮುಖ್ಯಾಧಿಕಾರಿಯು ಉತ್ತರ ಕೊಡುತ್ತಾ, ಇದು ತನ್ನಿಂದ ಅಸಾಧ್ಯವೆಂದಿರುವರು. ಈ ದೇವಸ್ಥಾನದ ಡಳಿತದಾರರನ್ನು ಹಂಗಿಗೆ ತರುವುದಕ್ಕಾಗಿ ಪಂಡಿತ ಪೂಲವೀಯರು ಆದಷ್ಟು ತ್ವರೆಯಿಂದ ವೆಲಬಾರಿಗೆ ಹೋಗಬೇಕೆಂದು ಅಖಿಲ ಭಾರತ ಅಸ್ಪೃಶ್ಯತಾ ನಿರೋಧ ಚಳವಳಿಯ ಅಧ್ಯಕ್ಷರಾದ ಶ್ರೀ. ಜಿ. ಡಿ. ಬಿರ್ಲಾರವರು ಬರೆದಿರುವುದರಿಂದ ಪೂಲವೀಯರು ಅಲ್ಲಿಗೆ ಬೇಗನೇ ಹೊರಡಲಿರುವರು.

ಇನ್ನೂ ಭಯೋತ್ಪಾದಕ ಅತ್ಯಾಚಾರಗಳು ಹೆಚ್ಚುತ್ತಲೇ ಇವೆ! ಕಳೆದ ಶುಕ್ರವಾರ ರಾಜಶಾಯಿ (ಬಂಗಾಳ) ಸೆಂಟ್ರಲ್ ಜೈಲಿನ ಸುಪರಿಂಟಿಂಡೆಂಟರಾದ ಮೆ. ಚಾರ್ಲ್ಸ್ ಲ್ಯೂಕರವರು ತಮ್ಮ ಪತ್ನಿ ಹಾಗೂ ಮಗಳೊಂದಿಗೆ ವೋಟಾರಾನಲ್ಲಿ ವಿಹಾರಾರ್ಥ ಹೋಗುತ್ತಿರಲು, ಅಕಸ್ಮಿತವಾಗಿ ಯುವಕನೊಬ್ಬನು ತನ್ನ ಸೈಕಲನ್ನು ಅವರ ವೋಟಾರಿನ ಎದುರಿಗೆ ಬಿಸಾಡಿದನು. ಲ್ಯೂಕರವರು ತಮ್ಮ ವೋಟಾರನ್ನು ನಿಲ್ಲಿಸಿದರು. ತಕ್ಷಣವೇ ಯುವಕನ ಕೈಯಲ್ಲಿ ಪಿಸ್ತೂಲು ಮಿಂಚಿತು. ಸಾಹೇಬರ ಕಡೆಗೆ ಹಾರಿತು! ಒಂದು ಪೆಟ್ಟು ಮುಖಕ್ಕೆ, ಮತ್ತೊಂದು ಕುತ್ತಿಗೆಗೆ!! ಯುವಕನು ಪರಾರಿಯಾದನು. ರಕ್ತಸ್ರಾವದಿಂದ ಬಿದ್ದ ಸಾಹೇಬರನ್ನು ಸೈಲುಹಂಡಿಯಲ್ಲಿ ಕಲ್ಕತ್ತೆಗೊಯ್ದರು. ರಾಜಶಾಯಿ ನಗರದಲ್ಲಿ ಮನೆಜಡ್ತಿಗಳಿಗಾರಂಭವಾಗಿವೆ. ಸಂದೇಹವಿಂದೊಬ್ಬನನ್ನು ಸೆರೆ ಹಿಡಿದಿರುವರು. ನಗರದಲ್ಲಿ ಈ ಘಟನೆಯಿಂದ ಸಂತೋಷವೇ ವಿಷಯವಾದಂತೆ ಹಾಹಾಕಾರ!

ಅಂಕೋಲೆ ತಾಲೂಕಿನಲ್ಲಿ ಕಾಂಗ್ರೆಸ್ಸು ಜನಗಳು ಪಿಕೆಟಿಂಗ್ ಮಾಡಿದ್ದರಿಂದ ೩೬ ಹೊಸದ ಅಂಗಡಿಗಳು ಮುಚ್ಚಲ್ಪಟ್ಟವು. ಜುಲೈ ತಿಂಗಳಿನಲ್ಲಿ ಹೊಸದ ಅಂಗಡಿ ಹರಾಜಾದಾಗ ಹೊಸದಾಗಿ ೬ ಅಂಗಡಿಗಳು ತೆರೆಯಲ್ಪಟ್ಟವು ಈ ಅಂಗಡಿಗಳಿಗೆ ಸೇರಿದ ನೂರಾರು ಚೀಲ ನಿಡುಗಳನ್ನು ಕತ್ತರಿಸಿ ಹಾಕಿದನು. ಹಾಗೆ ಕತ್ತರಿಸಿ ಹಾಕಿದ್ದರಿಂದ ಹೊಸದ ಅಂಗಡಿ ವಾಲೀಕರಿಗೆ ಬಹಳ ನಷ್ಟವಾಗಿ ಎಲ್ಲಾ ಅಂಗಡಿಗಳನ್ನೂ ಮುಚ್ಚಿದರು. ಅಸಹಕಾರ ಚಳವಳಿಯನ್ನು ಪ್ರಚಾರ ಮಾಡುವ ಕಾಂಗ್ರೆಸ್ಸು ಜನಗಳನ್ನು ಹುಡುಕಲು ಪೊಲೀಸಿನವರು ಪ್ರಯತ್ನಿಸುತ್ತಿದ್ದಾರೆ. ಅಂಕೋಲ ತಾಲೂಕಿನಲ್ಲಿ ಶಂದಾಯ ಕೊಡಕೂಡದೆಂದು ಚಳವಳಿಯನ್ನು ಪ್ರಚಾರ ಮಾಡುತ್ತಿರುವ ಬಾಸಗೋಡಿನ ಶ್ರೀ. ರಾಮನಾಯ್ಕರನ್ನು ಹುಡುಕುವುದಕ್ಕೋಸ್ಕರ ಅನೇಕ ಮನೆಗಳನ್ನು ಪೊಲೀಸರು ಜಡತಿ ಮಾಡಿದರು.

ಅಫಘಾನಿನ ಮಾಜಿ ಅಮೀರರಾದ ಅಮಾನುಲ್ಲರನ್ನು ಪುನಹ ಸಿಂಹಾಸನದ ಮೇಲೆ ಕುಳ್ಳಿರಿಸಲು ಕಾಬೂಲಿಗೆ ಬಂದ, ಪಿತೂರಿ ನಡಿಸುತ್ತಿದ್ದ ಗುಲಾಂ ನಾಭಿಜಾನ್ ಎಂಬ ಅಮಾನುಲ್ಲರ ಮಾಜಿ ಸೇನಾಧ್ಯಕ್ಷನಿಗೆ ರಾಜದ್ರೋಹದ ಅಪಾದನೆ ಮೇಲೆ ಪಾಸಿಯಾಯಿತು.

3ನೇ ದುಂಡು ಮೇಜು ಪರಿಷತ್ತು ಈ ತಾ. 17ರಲ್ಲಿ ಲಂಡನಿನಲ್ಲಿ ಪ್ರಾರಂಭವಾಯಿತು. ಅಧ್ಯಕ್ಷರಾಗಿದ್ದ ಪ್ರಧಾನಿ ಮೆ. ರಾಮ್ಸೆ ಮೆಕ್ಡನಾಲ್ಡ್‌ರವರು ಕಳೆದ ಪರಿಷತ್ತುಗಳ ಕೆಲಸವನ್ನು ವಿವರಿಸಿ, ಮುಂದಿನ ಕಾರ್ಯಕ್ರಮವನ್ನು ಸೂಚಿಸಿದರು. ಕೆಲವು ಸತ್ಕಾರದ ಭಾಷಣಗಳಾದ ಮೇಲೆ ಆರ್ಧ ಗಂಟೆಯಲ್ಲಿ ತಾ. 21ಕ್ಕೆ ವಿರಮಿಂಗು ಮುಂದಿರಿಸಲ್ಪಟ್ಟಿತು. ತಾ. 21ರಲ್ಲಿ ಪರಿಷತ್ತಿನ ಮೆಂಬರುಗಳೆಲ್ಲಾ ಸೇರಿ ಲೋತಿಯನ್ (ಫ್ರಾಂಚೈಸ್) ಕಮಿಟಿಯ ಸಿಫಾರಸ್ಸುಗಳನ್ನು ಚರ್ಚಿಸಿದರು. ತಾ. 23ರ ವರೆಗೆ ನಡೆದ ಚರ್ಚೆಯಲ್ಲಿ ಲೋತಿಯನ್ ಕಮಿಟಿ ರಿಪೋರ್ಟಿನ ಹೆಚ್ಚಿನ ಭಾಗಗಳು ಒಪ್ಪಲ್ಪಟ್ಟವೆ. ಸ್ತ್ರೀಯರ ಓಟಿನ ಹಕ್ಕನ್ನು ಕುರಿತು ಚರ್ಚೆಯು ನಡೆಯುತ್ತಾ ಇವೆ.

ಪ್ರಕಟಣೆ.

ಕರ್ನಾಟಕ ಸಾಹಿತ್ಯ ಪರಿಷತ್ತು ದಿಶನೇ ಸಮ್ಮೇಳನ.

ಪರಿಷತ್ತಿನವರ ನಿಭಾಯನೆ ಮೇರೆಗೆ ಡೆಲಿಗೇಟ್ ಫೀಜಿನ ವಿಷಯ ಚರ್ಚಿಸಲು ಮಹಾಸಭೆಯೊಂದು ಈ ತಾರೀಕು 26—11—32ನೇ ಶನಿವಾರ ಬೆಳಿಗ್ಗೆ 9 ಗಂಟೆಗೆ ಹೈಸ್ಕೂಲಿನಲ್ಲು ನಡೆಯುವ ಕಾರಣ ಸರ್ವರೂ ದಯಮಾಡಿಸಬೇಕಾಗಿ ಕೋರಿದೆ.

ಮಡಿಕೇರಿ, ಜಂಟಿಕಾರ್ಯದರ್ಶಿಗಳು.
ತಾ. 24—11—32.

ಪತ್ರವ್ಯವಹಾರ.

[ಜಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾ ಕರ್ತರು ಜವಾಬ್ದಾರರಲ್ಲ. ಸಂ]

ಮೈಸೂರು ವಿಷಯ.

ಕೊಡಗು ಮೈಸೂರಿಗೆ ಸೇರಬಹುದೋ ಎಂತ ಯೋಚಿಸುತ್ತಿರುವ ಈ ಕಾಲದಲ್ಲಿ ಮೈಸೂರಿನ ವಿಷಯ ಮೂರನೇಯವರು ಕೊಡುವ ಅಭಿಪ್ರಾಯಗಳು ವಾಚಕರಿಗೆ ರುಚಿಸಬಹುದು. ಪಾರ್ಲಿಮೆಂಟಿನಲ್ಲಿ ಲೇಬರ್ ಪಾರ್ಟಿಯ ಮೆಂಬರಾಗಿದ್ದ ಮೆ. ವೂಡ್‌ಜೋನ್ಸರು ಬೆಂಗಳೂರಲ್ಲಿ ಕಳೆದ ವಾರ ಮಾಡಿದ ಕೆಲವು ಉಪನ್ಯಾಸಗಳಿಂದ ಆರಿಸಿದ್ದನ್ನು ಇಲ್ಲಿ ಕೊಡುತ್ತೇನೆ.

"ಇನ್ನು ಮುಂದೆ ಹಿಂದೂಸ್ಥಾನದಲ್ಲಿ ಸ್ಥಾಪನೆಯಾಗಲಿಕ್ಕಿರುವ ಫೆಡರೇಶನಿನಲ್ಲಿ ಬ್ರಿಟಿಷ್ ಇಂಡಿಯಾದ ಪ್ರಜೆಗಳಿಗೆ ದೊರಕುವ ಹಕ್ಕುಗಳನ್ನೇ ದೇಶೀಯ ಸಂಸ್ಥಾನಗಳ ಪ್ರಜೆಗಳಿಗೂ ರಾಜರುಗಳು ಕೊಡಲೇಬೇಕಾಗುತ್ತದೆ. ಅಂದರೆ ಬ್ರಿಟಿಷ್ ಇಂಡಿಯಾದಲ್ಲಿ ಸ್ಥಾಪಿತವಾಗುವ ಪ್ರಜಾಪ್ರತಿನಿಧಿ ಸರಕಾರಕ್ರಮವನ್ನೇ ದೇಶೀಯ ರಾಜರುಗಳೂ ಅನುಸರಿಸಬೇಕಾಗುತ್ತದೆ. ಈಗಾಗಲೇ ಪ್ರಜಾಪ್ರತಿನಿಧಿ ಸಂಸ್ಥೆಗಳನ್ನು ಸ್ಥಾಪಿಸಿರುವ ರಾಜರುಗಳಿಗೆ ಬ್ರಿಟಿಷ್ ಇಂಡಿಯಾದ ಮೇಲ್ಪಂಕ್ತಿಯನ್ನು ಅನುಸರಿಸಲು ಏನೂ ಕಷ್ಟವಿಲ್ಲ. ಆದರೆ ನಿರಂಕುಶ ಪ್ರಭುತ್ವ ನಡಿಸುತ್ತಿರುವ ರಾಜರುಗಳು ಪ್ರಜಾಪ್ರತಿನಿಧಿ ಸರಕಾರವನ್ನು ಸ್ಥಾಪಿಸಬೇಕಾದರೆ ಬ್ರಿಟಿಷ್ ಸರಕಾರವೂ ಇಂಡಿಯಾ ಸರಕಾರವೂ ತುಂಬಾ ವತ್ಯಾಯಪಡಿಸಬೇಕಾಗುತ್ತದೆ."

ಮೈಸೂರು ದಿವಾನರಾದ ಸರ್ ಮಿರ್ಜಾರವರು ದುಂಡು ಮೇಜು ಪರಿಷತ್ತಿಗೆ ಹೋದವರಲ್ಲಿ ಅತ್ಯಂತ ಶಕ್ತಿವಂತರಂತರಲೂ, ರಾಜಕೀಯ ಸುಧಾರಣೆಗೆ ಒಪ್ಪುವವರಾಗಿದ್ದಾರೆಂತಲೂ ಮುಂದಿನ ಫೆಡರೇಶನಿನಲ್ಲಿ ಪ್ರಾಮುಖ್ಯ ಭಾಗತೆಗೆದುಕೊಳ್ಳತಕ್ಕವರಾಗಿದ್ದಾರೆಂದೂ ಹೇಳಿದರು.

"ಅರ್ಥಶಾಸ್ತ್ರ ತಿಳಿದವನಾಗಿ ತಾನು ಹೇಳುವುದೇನೆಂದರೆ—ಒಟ್ಟು ಬ್ರಿಟಿಷ್ ಇಂಡಿಯಾ ಮತ್ತು ದೇಶೀಯ ರಾಜ್ಯಗಳನ್ನು ನಾನು ನೋಡಿದ್ದರಲ್ಲಿ ಮೈಸೂರು ಅಡಳಿತದಷ್ಟು ಭದ್ರವಾದದ್ದೂ ಮತ್ತು ಚಲೋ ರೀತಿಯಿಂದ ನಡಿಸಲ್ಪಡುವಂಥಾದ್ದು ಬೇರೆ ಎಲ್ಲಿಯೂ ನೋಡಿಲ್ಲವೆಂತ ಹೇಳಲು ಏನೂ ಸಂದೇಹವಿಲ್ಲ" "ವಾಚಕ"

ಬಾಡಗ ಗ್ರಾಮದ ರಸ್ತೆ.

ಅಯ್ಯಾ,

ಈ ವಿಷಯವನ್ನು ಕುರಿತು ತಾ. 18—11—32 ರಲ್ಲು ಪ್ರಕಟವಾದ ಜಾತ್ಮಿಯಲ್ಲಿ ಕೆಲವು ನಿಜವಲ್ಲದ ಸಂಗತಿಗಳು ಹೊರಬಿದ್ದಿವೆ. ಆದುದರಿಂದ ಅವುಗಳನ್ನು ತಿದ್ದುವ ಉದ್ದಿಶ್ಯ ಈ ಕೆಳಗಿನ ಜಾತ್ಮಿಯನ್ನು ಬರೆದಿರುವದಾಗಿದೆ.

ನಾನು ಗ್ರಾಮದವರಿಂದ ತಿಳಿದ ಮಟ್ಟಿಗೆ ಹೀಗಿರುತ್ತೆ. ಸದರಿ ರಸ್ತೆಯನ್ನು ಕಳೆದ ವರ್ಷ ಸುರುಮಾಡುವಾಗ ಮೆ.. ಕೇಕಡ ಐಯ್ಯಪ್ಪನವರೂ, (ದವಸ ಬಂಡಾರದ ಪೈಸಿಡೆಂಟರು,) ಕುಞಾಳೆಯಂಡ ಪೊನ್ನಪ್ಪ ಪಟೇಲರೂ ಮುಂದಾಳಾಗಿ ಊರವರ ಸಹಾಯದಿಂದಲೂ, ದವಸದ ಬಂಡಾರದಿಂದ 150—0—0 ರೂಪಾಯಿಗಳಿಂದಲೂ, ಕೇಕಡ ಐಯ್ಯಪ್ಪನವರು, ಡಿ. ಬೋರ್ಡಿಗೆ ಅರ್ಜಿ ಮಾಡಿದ ಮೇರೆ ಡಿ. ಬೋರ್ಡಿನವರಿಂದ 175—0—0 ರೂಪಾಯಿಗಳಿಂದಲೂ ಕೆಲಸ ಮಾಡಿಸಿದ್ದಾಗಿದೆ. ಈ ವರ್ಷವೂ ಸಹ ಕೇಕಡ ಐಯ್ಯಪ್ಪನವರೂ, ಮತ್ತು ಪಳಂಗಟ್ಟಿರ ಚಂಗಪ್ಪನವರು ಸಹ ಮುಂದಾಳಾಗಿ ಊರವರ ಸಹಾಯದಿಂದ ಕೆಲಸಕ್ಕೆ ದವಸದ ಬಂಡಾರದಿಂದ 55—0—0 ರೂಪಾಯಿ, ದೇವರ ಬಂಡಾರದಿಂದ 50—0—0 ರೂಪಾಯಿ, ಡಿ. ಬೋರ್ಡಿನಿಂದ 42—0—0 ರೂಪಾಯಿ ಸಹ ಸೇರಿಸಿ ಕೆಲಸ ನಡಿಸಿದ್ದಾಗಿದೆ. ಮೆ. ಕೇಕಡ ಮುತ್ತಣ್ಣನವರೂ, ಕುಞಾಳೆಯಂಡ ಪೊನ್ನಪ್ಪನವರೂ ಈ ವರ್ಷ ಕೆಲಸಕ್ಕೆ ಅಗಲಿ, ಯಾವ ಎಜ್ಜರಿಕೆಗಾಗಲಿ ಬಂದವರಲ್ಲ ಮತ್ತು ಕೇಕಡ ಅಚ್ಚಯ್ಯನವರು ಸತ್ತು ಸುಮಾರು ಹತ್ತು ವರ್ಷವಾಗಿರಬಹುದು. ಹೀಗಿರುವಾಗ ತಾ. 18—11—32 ರಲ್ಲು ಕೊಡಗು ಪತ್ರಿಕೆಯಲ್ಲು ಕೇಕಡ ಮುತ್ತಣ್ಣನವರು, ಕೇಕಡ ಅಚ್ಚಯ್ಯನವರು ಮತ್ತು ಕುಞಾಳೆಯಂಡ ಪೊನ್ನಪ್ಪನವರು ಸೇರಿದ್ದಾರೆಯೆಂಬದಾಗಿ ಬರೆದದ್ದು ನ್ಯಾಯವಲ್ಲ. ಕೆ. ಐ. ಪೊನ್ನಪ್ಪ.

[ಸೂಚನೆ:—ತಾ. 18—11—32 ರಲ್ಲು ಪ್ರಕಟವಾದ ಈ ಸಂಬಂಧದ ಜಾತ್ಮಿಯಲ್ಲಿ ಮೆ. ಕೇಕಡ ಐಯ್ಯಪ್ಪನವರು ಎಂಬುದರ ಬದಲು ಮೆ. ಕೇಕಡ ಅಚ್ಚಯ್ಯನವರೆಂದು ತೆಗೆದಿಪ್ಪಿನಿಂದ ಪ್ರಿಂಟಾದದ್ದಾಗಿದೆ.

ಸಂ. ಕೊ.]

ಕೊಡಗಿನ ಗಜೆಟೆಡ್ ಉದ್ಯೋಗಸ್ಥರು.

ಅಯ್ಯಾ,

ಕೊಡಗಿನ ಗಜೆಟೆಡ್ ಉದ್ಯೋಗಸ್ಥರ ವರ್ಗಾವಣೆ ವಿಷಯವಾಗಿಯೂ, ಅವರು ಕೊಡಗಿನಲ್ಲಿ ಹದಿನೈದು ಇಪ್ಪತ್ತು ವರ್ಷಗಳ ವರೆಗೂ ಇರುವುದರಿಂದ ಕೊಡಗಿನ ಜನರ ಸ್ವತಂತ್ರ ಬೆಳವಣಿಗೆಗೆ ಉಂಟಾಗುವ ಹಾನಿಯನ್ನು ಕುರಿತೂ ಕೊಡಗಿಗೆ ಕೌನ್ಸಿಲ್ ಬಂದ ಅನಂತರದಿಂದಲೂ, ಕೌನ್ಸಿಲಿನಲ್ಲಿಯೂ, ಪತ್ರಿಕೆಗಳಲ್ಲಿಯೂ ಚಳವಳಿ ಹೂಡಿರುವ ವಿಷಯವಾಗಿ ಸರಕಾರದವರಿಗೂ ಮತ್ತು ಸರ್ವರಿಗೂ ತಿಳಿದ ವಿಷಯವಾಗಿದೆ. ಗಜೆಟೆಡ್ ಉದ್ಯೋಗಸ್ಥರನ್ನು ಮೂರು ಯಾ ಐದು ವರ್ಷಕ್ಕೊಂದಾವೃತ್ತಿ ವರ್ಗಾಯಿಸುವ ತತ್ವವನ್ನು ನಮ್ಮ ಸ್ಥಳೀಕ ಸರಕಾರದವರು ಒಪ್ಪಿಕೊಳ್ಳುವದಾದರೂ, ಹಾಗೆ ವರ್ಗಾಯಿಸಲು, ನೇರಪ್ರಾಂತ್ಯಗಳೊಡನೆ ನ್ಯಾಯವಾದ ಒಪ್ಪಂದಕ್ಕೆ ಬರಲು ಸಾಧ್ಯವಿಲ್ಲವೆಂತ ಸರಕಾರದವರು ಹೇಳಬಹುದು. ಕೊಡಗು ಪ್ರತ್ಯೇಕವಾಗಿರುವಷ್ಟು ಕಾಲ ಹಾಗೆ ವರ್ಗಾವರ್ಗಿಯ ವಿಷಯ ವಿವರ್ತಾಡು ಮಾಡುವದು ಸ್ವಲ್ಪ ಕಷ್ಟವಾಗಿದೆಯೆಂತ ಒಪ್ಪಿಕೊಳ್ಳಬಹುದು. ಆದರೆ ಅಂಥಾ ಉದ್ಯೋಗಸ್ಥರನ್ನು ಒಂದೇ ಸ್ಥಳದಲ್ಲಿಟ್ಟುಕೊಳ್ಳುವದರಿಂದುಂಟಾಗುವ ಹಾನಿಯನ್ನು ಕೆಲವು ಮಟ್ಟಿಗಾದರೂ ಕಮ್ಮಿ ಮಾಡಲು ನಮ್ಮ ಸ್ಥಳೀಯ ಸರಕಾರದವರಿಗೆ ಖಂಡಿತವಾಗಿಯೂ ಸಾಧ್ಯವಿದೆ. ಕೆಲವರ ಅಭಿಪ್ರಾಯದಲ್ಲಿ ನಮ್ಮ ಉದ್ಯೋಗಸ್ಥರಿದ್ದರೆ ಒಳ್ಳೇದು, ಅವರಿಗೆ ನಮ್ಮ ಮೇಲೆ ಪ್ರೀತಿಯಿರುತ್ತೆ ದಯೆಯಂತ ವಾದಿಸಬಹುದು. ಆದರೆ ಅಂಥಾ ಪ್ರೀತಿಯನ್ನು ಕಾರ್ಯತಃ ತೋರಿಸುವುದು ಬಹಳ ಕಷ್ಟವಾಗಿದೆ. ಹಾಗೆ ಪ್ರೀತಿಯನ್ನೂ ದಯೆಯನ್ನೂ ಕೆಲವರಿಗೆ ತೋರಿಸಿದ್ದಾದರೆ, ಇನ್ನು ಕೆಲವರಿಗೆ ಅದು ಅನ್ಯಾಯವಾಗುವ ಸಂದರ್ಭವಿದೆಯೆಂತ ಸರ್ವರೂ ಒಪ್ಪತಕ್ಕದ್ದಾಗಿದೆ. ನಮ್ಮ ರೆವಿನ್ಯೂ ಮತ್ತು ಜುಡಿಶಿಯಲ್ ಮತ್ತು ಪೊಲೀಸ್ ಇಲಾಖೆಯ ಗಜೆಟೆಡ್ ಉದ್ಯೋಗಸ್ಥರು ನಮ್ಮ ಕೊಡಗಿನವರೆಯಾದ್ದರಿಂದ, ಅವರಿಗೆ ನೆಂಟರಿಷ್ಟರೂ, ಇಷ್ಟ ಮಿತ್ರರೂ, ಆಸ್ತಿ ಪಾಸ್ತಿಗಳೂ ಸಹ ಇರುವಂಥಾದ್ದನ್ನು ಇಲ್ಲದೆ ಮಾಡುವದು ಬಹಳ ಕಷ್ಟವೇ ಸರಿ. ಹಾಗೆಂದ ಮೇಲೆ ನಮ್ಮ ಗಜೆಟೆಡ್ ಉದ್ಯೋಗಸ್ಥರಿಗೆ ಅವರ ಉದ್ಯೋಗದ ಪ್ರತಿಯೊಂದು ಅವಶದಲ್ಲೂ ಖಾಸೂನು ಪ್ರಕಾರ ಸರ್ವರಿಗೂ ಒಪ್ಪುವಂತೆ ಕೆಲಸ ನಡಿಸುವದು ಮನುಷ್ಯನ ಸ್ವಭಾವಕ್ಕಿಂತ ಮೀರಿದೆಯೆಂತ ಹೇಳಬೇಕಾಗಿದೆ. ಸದ್ಯದಲ್ಲಿ ಸರಕಾರದವರು ಇದರ ಕೊರತೆಯನ್ನು ಅರಿತು ಗಜೆಟೆಡ್ ಉದ್ಯೋಗಸ್ಥರನ್ನು ತಮ್ಮ ಸರ್ವಿಸ್ ತುಂಬಿದ ಕೂಡಲೇ ಪೆನ್ಶನ್ ಕೊಟ್ಟು ಕಳುಹಿಸುವುದು ನ್ಯಾಯವಾಗಿದೆ. ಮತ್ತೆ ನಮ್ಮ ಸರಕಾರದವರು ಕೊಡಗಿನ ಜನರ ಹಿತವನ್ನು ಬಯಸುವುದಾದರೆ, ಹಾಗೆ ಆದಷ್ಟು ಶೀಘ್ರದಲ್ಲಿಯೇ ಪೆನ್ಶನ ಕೊಟ್ಟು ಕಳುಹಿಸುವುದು ಧರ್ಮವೂ, ಕರ್ತವ್ಯವೂ ಆಗಿದೆ ಅಲ್ಲದೆ ಇದೇ ವಿಷಯ ಕೌನ್ಸಿಲಿನಲ್ಲಿ ಚರ್ಚೆ ಬಂದಾಗ, ನಾಲ್ಕೈದು ವರ್ಷಗಳೊಳಗಾಗಿ ರಿಟಯರ್ ಆಗುವ ಉದ್ಯೋಗಸ್ಥರನ್ನೇ ಗಜೆಟೆಡ್ ಉದ್ಯೋಗಗಳಿಗೆ ನೇಮಿಸಿ, ಒಂದೇ ಕೆಲಸದಲ್ಲಿ ಬಹುಕಾಲ ಒಬ್ಬ ಉದ್ಯೋಗಸ್ಥನು ಇರುವುದರಿಂದುಂಟಾಗುವ ದೋಷಗಳನ್ನು ಹೋಗಲಾಡಿಸುವ ವಿವರ್ತಾಡು ಮಾಡುತ್ತೀತಂತ ಸರಕಾರ ಮೆಂಬರು ಹೇಳಿದ ನೆನಪಿದೆ. ಆದರೆ ಸ್ಥಳೀಯ ಸರಕಾರದವರು ಕೆಲವು ಸಂದರ್ಭದಲ್ಲಿ ಗಜೆಟೆಡ್ ಉದ್ಯೋಗಸ್ಥರಿಗೆ ಒಂದು ವರ್ಷ, ಎರಡು ವರ್ಷ, ಸರ್ವಿಸ್ ತುಂಬಿದ ನಂತರವೂ (Extension) ಸರ್ವಿಸನ್ನು ಮುಂದರಿಸುವದನ್ನು ನಾವು ಕಾರ್ಯತಃ ನೋಡಿದ್ದೇವೆ. ಹೀಗೆ ಒಂದೆರಡು ವರ್ಷ ಸರ್ವಿಸನ್ನು ಮುಂದರಿಸಲಿಕ್ಕೆ ಯಾವ ಕಾರಣವೂ ನ್ಯಾಯವಾಗಿ ಕಂಡು ಬರುವುದಿಲ್ಲ. ಒಂದು ಉದ್ಯೋಗಕ್ಕೆ ಒಬ್ಬ ಮನುಷ್ಯನೇ ಕಾಯಮಾಗಿ ಯೋಗ್ಯನೆಂತ ತಿಳಿದುಕೊಳ್ಳುವುದು ತಪ್ಪು ಅಭಿಪ್ರಾಯ. ಮತ್ತು ನಮ್ಮ ಜನರ ಯೋಗ್ಯತೆಗೂ ತಕ್ಕ ಮರ್ಯಾದೆಕೊಟ್ಟಂತಾಗುವುದಿಲ್ಲ. ಅಥವಾ ಹಾಗೆ ಯೋಗ್ಯತೆ ಇರುವಂಥವರನ್ನು ಕೂಡಲೇ ದೊರಕಿಸಿಕೊಳ್ಳುವುದು ಸಾಧ್ಯವಿಲ್ಲದಿದ್ದರೆ ನೇರಪ್ರಾಂತ್ಯಗಳಿಂದಾದರೂ ಉದ್ಯೋಗಸ್ಥರನ್ನು ಬರಮಾಡಿಕೊಳ್ಳಬಹುದು. ಮತ್ತು ಹಾಗೆ ಬರಮಾಡಿಕೊಳ್ಳುವುದು ನಮ್ಮ ಸರಕಾರಕ್ಕೆ ಹೊಸ ವಿಷಯವಲ್ಲ. ಹೇಗೂ ಗಜೆಟೆಡ್ ಉದ್ಯೋಗಸ್ಥರಿಗೆ ಸರ್ವಿಸ್ ತುಂಬಿದರೂ ಸಹ ಪೆನ್ಶನ್‌ಕೊಟ್ಟು ಕೂಡಲೇ ಕಳುಹಿಸದೆ ಸರ್ವಿಸನ್ನು ಮುಂದರಿಸುವ (Extension) ನಮ್ಮ ಸರಕಾರದ ನೀತಿಯನ್ನು ಕೊಡಗಿನ ಜನಸಮುದಾಯವು ಕಂತೋಕ್ತವಾಗಿ ಖಂಡಿಸುತ್ತದೆಯೆಂತ ಸರಕಾರದವರು ಖಂಡಿತವಾಗಿಯೂ ಮರೆಯಬಾರದು. "ದೇಶಹಿತೈಷಿ"

ಪೊನ್ನಂಪೇಟೆಯ ಪತ್ರ.

ಈ ಊರಿಗೆ ಈಗಲೇ ಒಂದು ಗ್ರಾಮಪಂಚಾಯಿತಿಕೆ ಸಭೆ ಆಗಿದೆ. ಈ ಸಭೆಗೆ ಎಂಟುಮಂದಿ ಪಂಚಾಯಿತರು. ಇವರಲ್ಲಿ ನಾಲ್ಕು ಜನ ಹಿಂದುಗಳು, ನಾಲ್ಕು ಜನ ಮಹಮದೀಯರು; ಆಂತೂ ಹಿಂದೂ ಮುಸಲ್ಮಾನರು ಒಗ್ಗಟ್ಟು. ಆದರೆ ವರ್ಷದ ಆರು ತಿಂಗಳು ನಮ್ಮ ಸಹೋದರರಾದ ಮಾಪಿಳ್ಳೆ ಮಂದಿಗಳು ಮಲೆಯಾಳದಲ್ಲಿ; ಆದರೂ ವೋಟಿಂಗಿಗೆ ಕೋರಂ ಇದೆ. ಹೆಚ್ಚಿನ ತೆರಿಗೆ ಹಾಕುವ ಸಭೆ ಮಾಡಿದ್ದಾರೆ. ಅಧಿಕಾರಿಗಳ ಮುದ್ರೆ ಬೀಳಲಿಲ್ಲ. ಹಕ್ಕು ನಿರೀಕ್ಷಣೆಯಲ್ಲದ್ದಾರೆ.

ಬೆಂಚ್‌ಕೋರ್ಟು—ಕೇಸು ಇದ್ದೇ ಇದೆ. ಲಾಯರುಗಳು ನಮ್ಮ ಕೋರ್ಟಿನಲ್ಲಿ ಭಾಗವಹಿಸಿಕೊಳ್ಳುತ್ತಾರೆ. ಸದ್ಯ ಸರಕಾರಕ್ಕೆ ತಿಂಗಳಿಗೆ ಹತ್ತು ರೂಪಾಯಿಯಾದರು ಉತ್ಪತ್ತಿ ಮಾಡುತ್ತಾರು; ಜಪ್ತಿ ಚಾಕರಿಯಾಡಿ ಇಷ್ಟು ಉತ್ಪತ್ತಿ ಮಾಡುವುದು ಸಾಲದೇ!

ಟೌನ್ ಸಂಘ—ಒಳ್ಳೆ ತಮಾಷೆ! ನಾಚಿಕೆಗೇಡು! ತಾ. ೧೯ರಂದು 19—11—32 ರಲ್ಲಿ ವಾರ್ಷಿಕ ಸಭೆ ಜರುಗಿತು. ಅಧ್ಯಕ್ಷಪದವಿಗೆ ಒಪ್ಪಿದ ವಿಜಸ್ವಾಮಿಯವರು ಕಾರಣಾಂತರದಿಂದ ಬರಲಿಲ್ಲ. ಸಹಕಾರ ಇನ್ಸ್‌ಪೆಕ್ಟರನ್ನು ಮೆ. ಸಿ. ಎ. ಪೊನ್ನಪ್ಪನವರು ಅಧ್ಯಕ್ಷಪದವಿಗೆ ಸೂಚಿಸಿದರು. ವೋಟಿಂಗು ಸುರುವಾಯಿತು. ವೋಟಿಂಗಿನ ಕ್ರಮ ಹೇಗೆ? ಕಾರ್ಯಕ್ರಮದ ಪತ್ರದಲ್ಲಿ ಕೀರ್ ವಿಷಯದಿಂದ ಸುರು ವಿಷಯಕ್ಕೆ, ನೀವೇ ಆಲೋಚಿಸಿ. ಈ ಮಹಾಸಭೆಯ ದಿನ ಮೆಂಬರಾಗಲು ಹಾಜರಿದ್ದರು ಮಾಪಿಳ್ಳೆ ಮಹನೀಯರು ಬಂದಿದ್ದರು ಇವರ ಪರವಾಗಿ ಮೆ. ಸಿ. ಎ. ಪೊನ್ನಪ್ಪನವರು, ಈ ದಿನ ವೋಟಿಂಗು ನಡೆಸಬೇಕಾದರೆ ಇವರನ್ನೆಲ್ಲಾ ಮೆಂಬರಾಗಿ ಆರಿಸಬೇಕೆಂದರು. ಅವರ ಮಿತ್ರರೊಬ್ಬರು ಅನುಮೋದಿಸಿದರು. ಕಾರ್ಯಕ್ರಮದ ಪಟ್ಟಿಯಲ್ಲಿದ್ದಂತೆ ವೋಟಿಂಗು ನಡೆಯಬೇಕೆಂದೂ, ಅಧ್ಯಕ್ಷರ ಅನುಮತಿ ಮೇರೆ ಇತರ ವಿಷಯ ಎನ್ನುವಲ್ಲಿ ಅವರ ಅರ್ಜಿ ವಿಲೇವಾರಿ ಮಾಡಬಹುದೆಂದೂ ಕೆಲವರು ಹೇಳಿದರು. ಅದಕ್ಕೆ ಅಧ್ಯಕ್ಷರು ಒಪ್ಪಿ ಈ ವಿಷಯವನ್ನು ಜೆನ್ಯಾಗಿ ವಿವರಿಸಿ ಹೇಳಿದರು. ಆದರೆ ಅವರು ಈ ವೋಟಿಂಗು ಆಗಬೇಕಾದರೆ ಅರ್ಜಿದಾರರನ್ನು ಸೇರಿಸಿ ವೋಟಿಂಗು ನಡೆಸಬೇಕೆಂದು ಹಠ ಮಾಡಿದರು. ಅಧ್ಯಕ್ಷರು ನಾಲ್ಕೈದು ಸರ್ತಿ ಆಗುವುದಿಲ್ಲವೆಂದು ವಿವರವಾಗಿ ಹೇಳಿದರೂ ಆಗಲಿಲ್ಲ; ಕಡೆಗೆ ಅಧ್ಯಕ್ಷರು, ಅಧ್ಯಕ್ಷರ ಮತಿಗೆ ಬೆಲೆಯಿಲ್ಲದ ವೋಟಿಂಗಿಗೆ ನಾನು ಅಧ್ಯಕ್ಷನಾಗಿರಲು ಇಷ್ಟಪಡುವುದಿಲ್ಲವೆಂದು ವೋಟಿಂಗು ಬಿಟ್ಟು ಹೊರಟೇ ಹೋದರು. ಇನ್ನು ನಾವು ನಾವೇ, ಅವರು ಅವರೇ; ನೋಡಿದಿರಾ ಸಹಕಾರದ ತತ್ವ! ಹೀಗಾಗಿಯೇ, ಸಹಕಾರಿ ಸಂಘಗಳು ಈ ಸ್ಥಿತಿಗೆ ಬರಲು ಕಾರಣ. ಇನ್ನಾದರೂ ಇದರ ಮೂಲ ಊರಿನಲ್ಲೇ ನಡೆಯುತ್ತಿಲೇ ಇದೆ.

ಶಾಲೆ—ಸ್ಥಳಸಂಕೋಚ, ಮಕ್ಕಳು ಹೆಚ್ಚಾಗಿದ್ದಾರೆ, ಹೈಸ್ಕೂಲ್ ಮಾಡಬೇಕೆಂದು ಒಂದು ದೊಡ್ಡ ಮಹಾಸಭೆ ತಾರೀಕು 21 ರಲ್ಲಿ ನಡೆಯಿತು. ಮುಂದಿರುವ ಕಟ್ಟಡ ಮಾಡುವುದೆಂದು ಇದಕ್ಕೆ ಬೇಕಾದ ಹಣ ಸಂಪಾದಿಸಲು ಜನರನ್ನು ಮುಕ್ತರೂರು ಮಾಡಲಾಯಿತು. ಕಟ್ಟಡವಾದರೆ ಬರುವ ಏಪ್ರಿಲ್‌ನಿಂದ ನಾಲ್ಕನೇ ಫಾರಂ ಇಲ್ಲೇ ಆಗಬಹುದು. ಇದು ಒಡನೆ ಪೂರೈಸುವ ಹಾಗೆ ಮಹನೀಯರು ದ್ರವ್ಯಸಹಾಯ ಮಾಡಬೇಕಾಗಿ ಪ್ರಾರ್ಥನೆ.

ಭತ್ತದ ಸ್ಟೋರ್—ಇನ್ನೂ ಒಂದು ಸಾವಿರ ಬಟ್ಟಿ ಭತ್ತ ಮೂರಾಟ್ಟಕಿವೆಯಂತೆ. ನಗದ್ದು ಕ್ರಯಕ್ಕೆ ಕೊಳ್ಳುವದಳ್ಳಿಗಳೇ ಇಲ್ಲ, ಸಾಲಕೊಡುವುದು ಅಪೂರೂಪ. ಹೊಸ ಭತ್ತ ಇನ್ನು ಎರಡು ವಾರದಲ್ಲಿ ಪೇಟೆಗೆ ಬರುವಾಗ ಹಳೇ ಭತ್ತ ಕೇಳುವವರ್ಯಾರು? ಸ್ಟೋರಿನಿಂದ ಮಾಪಿಳ್ಳೆಗಳಿಗೆ ಕೊಂಚ ಭತ್ತ ಕಡಿಮೆ ನಮಗೆ ಕ್ರಯಕ್ಕೆ ಕೊಳ್ಳುವವರು ಅದಕ್ಕಿಂತ ಕಡಿಮೆ. ಬೇಂಕಿನ ಸಾಲಕ್ಕೆ ನಮ್ಮಲ್ಲಿ ತಕ್ಕ ಭತ್ತವಿದೆ. ಇನ್ನು ಹೆದರಿಕೆ ಇಲ್ಲ. ನಲ್ಲೂರಿನಲ್ಲಿ ಪೈಸಿಡೆಂಟರ ಮನೆಯಲ್ಲಿ ಒಂದು ಚಿಕ್ಕ ಸ್ಟೋರು; ಅಲ್ಲಿರುವ ಭತ್ತ ಮೈಸೂರಿಗಂತೆ. ಮೈಸೂರಿನವರು ಇನ್ನೂ ಯಾವಾಗ ಬರುತ್ತಾರೋ? ದಾರಿ ನೋಡುತ್ತಾ ಇದ್ದೇವೆ. ಅಂತೂ ಹಳೇ ಅಕ್ಕಿ ಬೇಕಾದವರಿಗೆ ಹೊಸ ಭತ್ತ ಬಂದಾಗ ನಮ್ಮ ಸ್ಟೋರಿನಲ್ಲಿ ಭತ್ತ ಸಿಕ್ಕುತ್ತೆ.

ಸಹಕಾರಿ ಯೂನಿಯನ್—ಹೆಚ್ಚಿನ ಸಹಕಾರ ಪ್ರಚಾರ ಕೆಲಸ ಮಾಡದಿದ್ದರೂ ಫೆಡರೇಶನಿಗೂ ಮತ್ತು ಸಂಘಕ್ಕೂ ಮಧ್ಯೆ ಟಪ್ಪಾಲು ನಡಿಸುತ್ತದೆ. ಲೋಕಲ್ ಫಂಡ್ ರೋಡ್ ಕೆಲಸ ಕಂಟ್ರಾಕ್ಟು ನಡಿಸುತ್ತಾರೆ. ಕಾಯಲು ತೀರಿದನಂತರ ಪ್ರಚಾರ ಕೆಲಸಕ್ಕೆ ಹೊರಡಬಹುದು. ಆಗ ಪುರುಷತ್ತಿನ ಸಮಯ, ಆಗಲ್ಲವೇ ವಸೂಲಿನ ಸಮಯ ಆಗಲೇ ಯೂನಿಯನ್ ಮೆಂಬರುಗಳು ಎಚ್ಚರದಿಂದಿರಬೇಕಾದದ್ದು.

ಶಾರದಾಶ್ರಮ—ಯಾವಾಗಲೂ ಗೀತಾ ಕ್ಲಾಸು ನಡೆಯುತ್ತದೆ ಇನ್ನು ತಿಂಗಳಿಗೊಂದು ಹುಣ್ಣಿಮೆ ನಡೆಯುವುದಂತೆ. ಒಬ್ಬ ಸ್ವಾಮಿಯವರು ಮತ್ತು ಒಬ್ಬ ಬ್ರಹ್ಮಚಾರಿಯು ಇದ್ದಾರೆ. ಇನ್ನಿಬ್ಬರು ಬೇಲೂರು ಮಠಕ್ಕೆ ಮಹಾಪುರುಷರ ದರ್ಶನಕ್ಕೆ ದಯಮಾಡಿಸಿದ್ದಾರೆ.

ಕುಶಾಲಪುರ—ಕಳೆದ ತಿಂಗಳೆನಲ್ಲಿ ಯಾರೋ ಸತ್ಯಾಗ್ರಹಿಗಳು ಸ್ವರಾಜ್ಯ ಬಾವಟೆ ಹಾರಿಸಿದರಂತೆ! ಆದ್ದರಿಂದ ಈಗ ಆದಿತ್ಯವಾರ ದಿನ ಒಬ್ಬ ಪೊಲೀಸಿನವನಿಗೆ ಅಲ್ಲಿ ಪಹರೆಯಡ್ಯೂಟಿ! ನೋಡಿದಿರಾ ಸ್ಥಳದ ಮಹಿಮೆ! ಕಾರಾಗೃಹಕ್ಕೆ ಹೋದ ಸತ್ಯಾಗ್ರಹಿಗಳ ಜುಲುಮೆಯನೆಗೆ ಪೊಲೀಸರಿಗೆ ಜಪ್ತಿಯ ಹಿಡ್ಯಾಟ ಇರಲಿ, ನಮ್ಮ ಊರಿನಲ್ಲಿ ಕಳವು, ಕಲಹ ಕಮ್ಮಿ. ಹಾಗಾದರೆ ಪೊಲೀಸಿನವರಿಗೆ ಈ ಕೆಲಸವಾದರೂ ಸಾಕಷ್ಟು ಇರಲಿ.

ಹಣದ ತಾಪತ್ರೆ ವಿವರೀತ. ಹುತ್ತಿ ಹಬ್ಬ ಹತ್ತಿರವಾಯಿತು. ಭತ್ತದ ಬೆಲೆ ಕಮ್ಮಿಯಾಗುತ್ತಾ ಬರುತ್ತಲಿದೆ. ಈ ವರ್ಷದ ಬೆಳೆಯೇನೋ ಚೆನ್ನಾಗಿದೆ. ಆದರೆ ಮುಂದಕ್ಕೆ ಗಾಡಿಗೆ 35/ರೂ. ಆಗಬಹುದೋ ಎಂದು ಹೆದರಿಕೆ. ಕಳೆದ ವರ್ಷದ ಕುದಾಯವೇ ಇನ್ನೂ ಬಾಕಿ. ಹಾಗಾದರೆ, ಇನ್ನು ಮುಂದಿನ ವರ್ಷದ ಗತಿಯೇನು? ಸೊಸೈಟಿ ಬ್ಯಾಂಕಿನ ಸಾಲ ಸಂಘಗಳು ತೀರಿಸದೆ ಹಣ ಸಿಕ್ಕುವುದೂ ಇಲ್ಲ. ಟಕಾವಿ ಹಣ ಸಿಕ್ಕಿದರೆ ವಾಪಸು ಕೊಡಲು ನಮ್ಮಲ್ಲಿ ಉಳಿಯುವುದೂ ಇಲ್ಲ. ಈಗಾಗಲೇ ಜೀವವಿಮೆ ಮಾಡಿದ ಕಂಪೆನಿಯಿಂದ ಸಾಲ ತೆಗೆಯುವ ವಿಷ್ಟಾಡು ಮಾಡುತ್ತಲಿದ್ದಾರೆ. ಅದರೊಂದಿಗೆ ಹರಿಜನರಿಗೆ ದೇವರ ದರ್ಶನ, ಸಂಸವೂನತೆ ಕೊಡಬೇಕೆನ್ನುವವರ ವೋಟಿಂಗು. ಈಗ ಬಡ ರೈತನ ಗೋಳು ನೋಡುವ ಕಾಲ. ಹಣವಿದ್ದರೆ ಹುತ್ತಿಗೆ ಗಾಡಿಗೆ 20/ರೂಪಾಯಿನಂತೆ ಅಡ್ವಾನ್ಸ್. ಹೇಗೆ ನಾವು ಮುಂದ

(FREE INSURANCE)

ಉಚಿತ ವಿಮಾ.

ಮ್ಯೂಚುವಲ್ ಬೆನಿಫಿಟ್ ಸ್ಕೀಂ ಎಂಬ ಅನ್ಯೋನ್ಯ ಸಹಾಯ ಪದ್ಧತಿ.

(Mutual Benefit Scheme.)

ಜೈ ಭಾರತ ಇನ್‌ಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್, ಹೆಡ್ ಆಫೀಸು—ಮದ್ರಾಸ್.

ಲೈಫ್ ಇನ್‌ಷ್ಯೂರೆನ್ಸಿನ ಕಂಪೆನಿಗಳ ಕಾನೂನಿಗೆ ಅಧೀನವಾಗಿದೆ. ಸರಕಾರದಲ್ಲಿಡಬೇಕಾದ ಠೇವಣಾತಿ ಇಡಲಾಗಿದೆ.

ಈ ಮೇಲ್ಕಂಡ ಕಂಪೆನಿಯು ಅನ್ಯೋನ್ಯ ಸಹಾಯಕ್ಕಾಗಿ ಕಳೆದ ವರ್ಷ ಅಂದರೆ 1931ನೇ ಫೆಬ್ರುವರಿಯಲ್ಲಿ ಮದ್ರಾಸಿನಲ್ಲು ಸ್ಥಾಪಿತವಾಗಿ ಈ ವರೆಗೆ 25500 ಸಾವಿರಕ್ಕೂ ಹೆಚ್ಚಾಗಿ ಪಾಲಿಸಿಗಳನ್ನು ಪಡೆದಿರುತ್ತೆ. ಈ ಮೇಲ್ಕಂಡ ಕಂಪೆನಿಗೆ ಐಶ್ವರ್ಯವಂತರೂ, ಬಡವರೂ, ಮಿತಸಂಪಾದನೆಯವರೂ, ಜಾತಿ ಮತಗಳ ಬೇಧವಿಲ್ಲದೆ ಜಾತಿವಾರೂ, ಕೋಮುವಾರೂ, ಹೆಂಗಸರೂ, ಗಂಡಸರೂ ಹೆಚ್ಚು ದುಸುಂ ಕೊಡದೆಯೇ ಉಚಿತ ಜೀವ ವಿಮೆ ಮಾಡಿಕೊಳ್ಳಬಹುದು. 18 ವರ್ಷಕ್ಕೆ ಮೇಲ್ಪಟ್ಟು 60 ವರ್ಷದೊಳಗಿರುವವರು ಈ ಕಂಪೆನಿಗೆ ಸೇರಬಹುದು. ಈ ಕಂಪೆನಿಗೆ ಸೇರಲು ಇಚ್ಛಿಸುವವರು ಸುರುವಿನಲ್ಲಿ ರೂ. 5—8—0ನ್ನು ಮೊತ್ತ ಕಟ್ಟಬೇಕ್ಕದ್ದು. ಅನಂತರ ತಿಂಗಳು ಒಂದರ 1 ರೂ. ಸ್ವಲ್ಪದರಲ್ಲು ದೊಡ್ಡ ಲಾಭ ದೊರೆಯುತ್ತೆ. ಆದ್ದರಿಂದ ಇಂಥಾ ಸುಸಮಯವನ್ನು ಕಳೆದುಕೊಳ್ಳಬೇಡಿ. ಈ ದಿನವೇ ಪಾಲಿಸಿಗಳನ್ನು ಹೊಂದಲು ಅರ್ಹರಾಗಿರಿ. ಇದರ ಫಲವನ್ನು ಹೊಂದಲು ಭಾಗಿಗಳಾಗಿರಿ.

ಹೆಚ್ಚಿನ ಮಾಹಿತಿಗಳಿಗೆ ಈ ಕೆಳಗಿನವರಿಗೆ ಬರೆದು ತಿಳಿದುಕೊಳ್ಳಬಹುದು. ಅಲ್ಲದೆ ಇವರು ಕೊಡಗಿನ ಎಲ್ಲಾ ಕಡೆಗಳಲ್ಲಿಯೂ ತಿರುಗುತ್ತಲಿರುತ್ತಾರೆ.

ಯನ್. ಬಿ. ಕರುಂಬಯ್ಯ.
ಏಜೆಂಟ್,
ಜೈ ಭಾರತ ಇನ್‌ಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್,
12—6 ನಾಪೋಕ್ಲು, (ಕೊಡಗು)

ಆಟೋಹಾರ್ಪ್ ಪಿಯೋನೋ ಪೊರ್ಪ್ ಎಂಬ ಹಾರ್ಮೋನಿಯಂಗಳು.

ಒಂದಕ್ಕೆ ರೂ. 4—8—0.



ಈ ಹಾರ್ಮೋನಿಯಂಗಳು ಹೊಸದಾಗಿ ತಯಾರಾದವು. 23 (ರೀಡ್ಸ್) ಸ್ವರಗಳು ಇರುವವು. ಭಾರಿ ಕ್ರಯದ ಹಾರ್ಮೋನಿಯಂಗಳಿಗಿಂತಲೂ ಚೆನ್ನಾಗಿರುವವು. ನಾಟಕ, ಗುಡಿ ಮುಂತಾದವುಗಳಲ್ಲಿ ಉಪಯೋಗಿಸಲು ಬಹು ಚೆನ್ನಾಗಿರುವವು. 23 ಸ್ವರಗಳಿರುವ ಹಾರ್ಮೋನಿಯಂ 1ಕ್ಕೆ 4—8—0. ಪೇಕಿಂಗ್, ಟಿ. ಖ. 1—8—0 ಪ್ರತ್ಯೇಕ.

ವಿಳಾಸ— ಸಿಟಿ ವೂಟ್,
168, ಜೈನಾ ಬಜಾರ್,
4—3 ಮದ್ರಾಸು.

---

೪೦ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕಕಂಪನಿ ೧೭೫೩

ಜ್ವರದ ಗುಳಿಗೆಗಳು.

ಜಳಿಜ್ವರ, ಚಾತುರ್ಥಿಕ ಜ್ವರ, ದಿನಬಿಟ್ಟು ಬರುವ ಜ್ವರ, ಮಲೇರಿಯಾ ಜ್ವರ ಇತ್ಯಾದಿ ಜ್ವರಗಳ ಮೇಲೆ ರಾಮ ಬಾಣದಂತೆ ಇವೆ. ಬಾಟ್ಲಿಗೆ ರೂ. ೧. ಟಿ. ಖ. ೭ ಆಣೆ. ಜರೂರು ತರಿಸಿಕೊಳ್ಳಿ.

ಗಣೇಶ ರಾಮಚಂದ್ರ ಕರ್ಕಿ,
(52—15) ಮತ್ತು ಕಂಪೆನಿ,
ಗಿರಗಾಂವ, ಮುಂಬಯಿ,

ಇಂಡಿಯಾ ಎಕ್ವಿಟೇಬಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

(ಸ್ಥಾಪಿಸಲ್ಪಟ್ಟದ್ದು 1908.)

ಕಳೆದ ವರ್ಷದ ಫಲಿತಾಂಶಗಳು.

ಹಿಂದಿನ ವರ್ಷದ ಕೆಲಸಕ್ಕಿಂತ 64% ಹೆಚ್ಚು.

ಕಳೆದ ವರ್ಷ ಸಂಭವಿಸಿದ ಹಕ್ಕು ಬಾಧ್ಯಸ್ಥರಲ್ಲಿ ಶೇಕಡ 96 6 ಜನರಿಗೆ ಹಣ ಅದೇ ವರ್ಷ ಕೊಡಲಾಗಿದೆ.

ವಾರ್ಷಿಕ ದಾವು ಶಾಯಿ 31% ವೃದ್ಧಿ.

ಇಂಡಿಯಾ ಎಕ್ವಿಟೇಬಲ್ ಇನ್ಶೂರೆನ್ಸ್ ಕಂಪೆನಿಯು ಬುಡದಿಂದ ತಲೆಯ ವರೆಗೂ ಇಂಡಿಯನೇ.

ವಜನದಾರರಾದ ಏಜೆಂಟರುಗಳು ಬೇಕಾಗಿದ್ದಾರೆ.

ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಕೆ. ಇ. ಜಾಕೊ,
ಬ್ರಾಂಚ್ ಸೆಕ್ರೆಟರಿ,
159 ಶ್ರೀ ನರಸಿಂಹರಾಜ ರೋಡ್,
ಬೆಂಗಳೂರು ಸಿಟಿ.

ಅಥವಾ

(1) ಮಿಸ್ ಸಿ. ಯಂ. ಪೂವಯ್ಯ,
ಲೇಡಿ ಆರ್ಗನೈಸರ್,
'ಪೂವಯ್ಯ ವಿಲ್ಲ,'
ಮಡಿಕೇರಿ.

(2) ಯಂ. ಸಿ. ಅಪ್ಪಚ್ಚು,
ರಿಟಯರ್ಡ್ ವಾರುಪತ್ಯಗಾರ್,
ಹಿಲ್ ರೋಡ್,
ಮಡಿಕೇರಿ.

(12—12)

GOVERNMENT SOAP FACTORY,

Bangalore.

ವಿಶ್ವಾಸಾರ್ಹತೆ.

ಅತ್ಯುತ್ತಮವಾದ ಟಾಯಿಲೆಟ್ ಸಾಬೂನಿನಲ್ಲಿ ಯಾವ ಯಾವ ಗುಣಗಳು ಅವಶ್ಯಕವೆಂದು ನೀವು ತಿಳಿದಿರುತ್ತೀರೋ ಆ ಗುಣಗಳೆಲ್ಲಾ

ಮೈಸೂರು ಸ್ಯಾಂಡಲ್ ಸಾಬೂನಿನಲ್ಲಿವೆ.

ನಾವು ನಿಮಗೆ ಭರವಸೆಯನ್ನೀಯುತ್ತೇವೆ.

ಎಲ್ಲಾ ಕಡೆಯಲ್ಲಿಯೂ ದೊರೆಯುತ್ತವೆ.

ಗವರ್ನ್‌ಮೆಂಟ್ ಸೋಪ್ ಫ್ಯಾಕ್ಟರಿ,
52—12 ಬೆಂಗಳೂರು.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬಾಂಕ್, ಲಿಮಿಟೆಡ್ ಕೂ ಅಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿಕವಾದದ್ದು 1922ರಲ್ಲು)

		ರೂ.
ಶೇರ್ ಬಂಡವಾಳ	—	50,000— 0—0
ವಸೂಲಾದ ಶೇರ್ ಮೊಬಲಗು	—	27,670— 0—0
ಜಮೂಬಂದ ಠೇವಣಾತಿ	—	23,1509—13—9
ವಸೂಲಾದ ಕ್ಷೇಮನಿಧಿ	—	45,868—14—0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ಪರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ.

ಪ್ರೆಸಿಡೆಂಟರು,
ಪಟ್ಟವಾಡ ದೇವೈಯ್ಯನವರು,
ಶಾವ್ ಬಹದ್ದೂರ್.

ಮ್ಯಾನೇಜರ್
ಮನೆಯಪ್ಪಂಡ ಬೆಳ್ಯಪ್ಪನವರು.

ಸೆಕ್ರೆಟರಿ
ಸಿ. ಯನ್. ವೆಂಕಪ್ಪಯ್ಯನವರು, ಬಿ.ಎ, ಬಿ.ಎಲ್.

ತಾರೀಕು 1—7—1932.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡಿದ್ದಾರೆಂದೂ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್‌ರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಶೀಘ್ರವಾಗಿ ಪೂರ್ತಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು.

ಕೊಡಗಿನ ಎಲ್ಲಾ ಭಾಗಗಳಿಗೆ—ಮೆ. ಮುಂಡಂಡ ಯಂ. ಬಿದ್ದಪ್ಪನವರು.

ಉತ್ತರ ಕೊಡಗಿಗೆ ಪೆ' ಚೌರಿರ ಮಾದೈಯ್ಯನವರು,

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಮಂಡೇಪಂಡ ಸೋಮೈಯ್ಯನವರು, (ಜಾದಿಭಂಡಾರ.)

ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಮೊದಪ್ಪನವರು,

ಪೊನ್ನಂಪೇಟೆನಾಡು—ಮೆ. ಪಿ. ಜೆ. ಮುದ್ದಯ್ಯನವರು, ಮತ್ತು ಆರಮಣಮೊಡ ಪಿ ಕಾರ್ಯಪ್ಪನವರು,

ಹುದಿಕೇರಿ & ತಿತಿಮತ್ತಿ—ಮೆ. ಜೆ. ಮೊದಯ್ಯನವರು,

ಸುಂಟಿಕೊಪ್ಪ—ಮೆ. ಅಪ್ಪಚಟ್ಟೋಳಂಡ ಮೂಚಯ್ಯನವರು,

ಸೂಚನೆ:—ಪೈಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ,

ಮೂರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿಯೊಬ್ಬ ಮೆಂಬರನ್ನಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಮತ್ತು ದವಸ ಭಂಡಾರದ ಉಪನಿಬಂಧನೆಗಳೂ, ಪಾಸ್ ಬುಕ್ಕುಗಳೂ, ಎಲ್ಲಾ ಸಹಕಾರಿ ಸಂಘಗಳ ಮತ್ತು ದವಸ ಭಂಡಾರಗಳ ಕೆಲಸಗಳನ್ನು ಕ್ರಮ ಪ್ರಕಾರ ನಡಿಸಲು ಅತ್ಯವಶ್ಯವಾಗಿರುವ, ರೂಲ್ಸ್‌ಗಳು ಸಾರವಾಗಿ ತಯಾರಿಸಲ್ಪಟ್ಟಿರುವ ದಾವಾ ಫಾರಮುಗಳೂ, ಖರಾರು ಫಾರಮುಗಳೂ, ಜಮ್ಮ ಮಂಜೂರಾತಿ ಫಾರಮುಗಳೂ, ಕುಟುಂಬಸ್ಥರ ಒಪ್ಪಿಗೆ ಫಾರಮುಗಳೂ, ಜಾಮೀನು ಖರಾರು ಫಾರಮುಗಳೂ, ಸ್ಟೋರ್ ಕೀಪರ್ ಖರಾರು ಫಾರಮುಗಳೂ, ಓವರ್ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಜಮಾ ಖರ್ಚಿನ ರಿಜಿಸ್ಟರ್ ಪುಸ್ತಕಗಳೂ ಮತ್ತು ಚೆಕ್ ಪುಸ್ತಕಗಳೂ ನಮ್ಮಲ್ಲಿ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. ಹುದ್ದು ಬರಲಿಕ್ಕೆ ಆಗದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು.

ಮೇನೇಜರ್,
"ಕೊಡಗು" ಆಫೀಸು,
ಮಡಿಕೇರಿ.

ಸರಕಾರಿ ಭದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 26,481 ಪಾಲಿಸಿಗಳು.

ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ. ಒಟ್ಟು ಪ್ರೀಮಿಯಮಿನ ಪರಮಾನ—179 ಲಕ್ಷ ರೂ.
ವಿಮೆದಾರರಿಗೆ ಕೊಟ್ಟದ್ದು—3281 ಜನರಿಗೆ 81 ಲಕ್ಷ ರೂ. ಪಾಲಿಸಿದಾರರಿಗೆ ಸಾಲ—8013 ಜನರಿಗೆ 32 ಲಕ್ಷ ರೂ.
ಭಂಡವಾಳವು ಹೆಚ್ಚಾದದ್ದು—ಸುಮಾರು 10½ ಕೋಟಿ ರೂ.

ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮೊಡಿರುವ 1,78,322 ಜನರಿಗೆ 38ಕೋಟಿ ರೂ.
ಮೇಲಿನ ಕೆಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22.4ರಕ್ಕಿಂತ ಮಿಗಿಲಾದ ಕಮ್ಮಿ ಖರ್ಚಿನಲ್ಲಿಯೇ ನಡಿಸಲ್ಪಟ್ಟಿದ್ದಾಗಿದೆ.
ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ, ಇದರ **ಕಡಿಮೆ ಖರ್ಚಿನ ಮತ್ತು ಉತ್ತಮವಾದ ನಡಿಸುವಿಕೆಯಿಂದಲೂ** ಗೊತ್ತುಮಾಡಿಕೊಳ್ಳಬಹುದು.

ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂದು ಇಚ್ಛಿಸುವ ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚಿಚ್ಚು ಬತ್ತಾಸೆಯನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಎಂಬದು ಆದರ ಹಿಂದಿನ ದಾಖ್ಲೆಗಳಿಂದಲೂ, ಮುಂದಿನ ಅಂದಾಜಿನಿಂದಲೂ ವ್ಯಕ್ತವಾಗುತ್ತದೆ.
ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು
ಅಥವಾ ಇನ್ಸ್‌ಪೆಕ್ಟರೇಟ್ ಆಫೀಸು, ಮಡಿಕೇರಿ.

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ	ಕಲ್ಕತ್ತಾ	ಕೌಲಾಲಂಪೂರು	ಪೊಂಬಾಸ	ರಂಗೂನು
ಅಹ್ಮದಾಬಾದು	ಕೊಲಂಬೊ	ಲಾಹೋರ್	ನಾಗಪುರ	ರಾವಲ್‌ಪಿಂಡಿ
ಅಜ್ಮೀರ್	ಡಕ್ಕಾ	ಲಕ್ನೌ	ಪಾಟ್ನಾ	ಸುಕ್ಕೂರು
ಅಲ್ಲಾಹಾಬಾದು	ಡೆಲ್ಲಿ	ಮದ್ರಾಸು	ಪೂನಾ	ತಿರುಚಿನಾಪಳ್ಳಿ
ಬೊಂಬಾಯಿ	ಡಾಲಗಾನ್	ಮಂಡಲೆ	ರಾಯಿಪುರ	ತಿರುವೆಂಡ್ರಮ್
ಭೋವಾಲ್	ಕರಾಚಿ	ಮಡಿಕೇರಿ	ರಾಂಚಿ	ವಿಶಾಖಪಟ್ಣ [52—39

ಸಣ್ಣ ಹುಡುಗರ ಸಲುವಾಗಿ

ಡೋಂಗರೆ ಇವರ ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ
ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವವು ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ: ಬಾಟ್ಲಿ 1ಕ್ಕೆ 14 ಆಣೆ, ಟಪ್ಪಾಲು ಖರ್ಚು 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,
52—46 ಗಿರಿಗಾಂವ, ಮುಂಬಯಿ.

ಕಾರ್ಡು ಬರೆದರೆ ಆಗನ
ಕ್ಯಾಟಲಾಗು ಮೂಫಿಯಾಗಿ
ಕಳುಹಿಸಲ್ಪಡುವುದು.



ಕೋವಿಗಳು, ಕತ್ತಿಗಳು, ಬರ್ಚಿಗಳು, ತೋಟಿಗಳು, ಕೇಪುಗಳು, ಮದ್ದು ಮತ್ತು ಬೇಟೆಯ ಎಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN ALLIBHOY & SONS LTD.,
Largest Importers of Firearms and Ammunition
Cheapest priced firm in India,
26—12 **210 Abdul Rehiman Street, BOMBAY.**

Printed & published by P. I. Belliappa at "Kodagu" Press Mercara